# GOVERNMENT OF KARNATAKA

# KARNATAKA LOKAYUKTA

No.UPLOK-2/DE/57/2017/ARE-14
UPLOK-2/DE/197/2017/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 06th October, 2022.

## RECOMMENDATION

Sub: Departmental Inquiry against Shriyuths:

(1) Siddagangaiah, Forest Guard, Forest Department, Turuvekere, Tumkur District.

(2) H.K.Prakash, the then Executive Officer, Taluk Panchayath, Turuvekere Taluk, Tumkur District.

(3) Umesh K.P., Assistant Engineer, Zilla Panchayath Division, Turuvekere Taluk, Tumkur District.

(4) Vijayanna G.M., Secretary, Kodigehalli Grama Panchayath, Turuvekere Taluk, Tumkur District-reg.,

Ref: 1) Government Order No.ಅಪಜೀ 177 ಅಇವಿ 2016, Bengaluru, dated: 19/12/2016.

2) Government Order No.ಗ್ರಾಅಪ 260 ವಿಸೇಬಿ 2016, Bengaluru, dated: 27/01/2017.

3) Nomination Order No.UPLOK-2/DE/57/2017, Bengaluru, dated: 12/01/2017 of Upalokayukta, State of Karnataka, Bengaluru.

4) Nomination Order No.UPLOK-2/DE/197/2017, Bengaluru, dated: 07/02/2017 of Upalokayukta, State of Karnataka, Bengaluru.

5) Inquiry Report dated: 29/09/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 19/12/2016 and 27/01/2017 initiated the disciplinary proceedings against (1) Shri Siddagangaiah, Forest Guard, Forest Department, Turuvekere, Tumkur District; (2) Shri H.K.Prakash, the then Executive Officer, Taluk Panchayath, Turuvekere Taluk, Tumkur District; (3) Shri Umesh K.P., Assistant Engineer, Zilla Panchayath Division, Turuvekere Taluk, Tumkur District and (4) Shri Vijayanna G.M., Secretary, Kodigehalli Grama Panchayath, Turuvekere Taluk, Tumkur District (hereinafter referred to as Delinquent Government Official, for short as DGO Nos.1 to 4) and entrusted the Departmental Inquiry to this Institution.

2. This Institution by Nomination (1) Order No.UPLOK-2/DE/57/2017, Bengaluru, dated: 12/01/2017 and (2) Order No.UPLOK-2/DE/197/2017, Bengaluru, dated: 07/02/2017 nominated Additional Registrar of Enquiries-1, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs No.1 to 4. Subsequently, by Order No.UPLOK-2/DE/2017, Bengaluru, dated: 04/07/2017, the Additional Registrar of Enquiries-7,

Karnataka Lokayukta, Bengaluru was re-nominated as Inquiry Officer to conduct Departmental Inquiry against DGO No.1 to 4. Again, by Order No.UPLOK-1 & 2/DE/Transfers/2018, Bengaluru, dated: 06/08/2018, the Additional Registrar of Enquiries-14, Karnataka Lokayukta, Bengaluru was re-nominated as Inquiry Officer to conduct Departmental Inquiry against DGOs No.1 to 4.

3. The DGO No.1, Shri Siddagangaiah, Forest Guard, Forest Department, Turuvekere, Tumkur District; DGO No.2, Shri H.K.Prakash, the then Executive Officer, Taluk Panchayath, Turuvekere Taluk, Tumkur District; DGO No.3, Shri Umesh K.P., Assistant Engineer, Zilla Panchayath Division, Turuvekere Taluk, Tumkur District and DGO No.4, Shri Vijayanna G.M., Secretary, Kodigehalli Grama Panchayath, Turuvekere Taluk, Tumkur District were tried for the following charges:

**ANNEXURE-1**
**CHARGE**

While you, DGO No.1 Sri. Siddagangaiah, while working as Forest Guard, Turuvekere Taluk, Tumkur District; DGO No.2 Sri. H.K Prakash, the then Executive Engineer, Taluk Panchayath, Turuvekere Taluk, Tumkur District and DGO No.3 Sri. Umesh K.P, Assistant Engineer, Zilla Panchayath Division, Turuvekere Taluk, Tumkur Distirct and DGO No.4 Sri. Vijayanna G.M, Secretary, Kodagihalli Gram Panchayath, Turuvekere Taluk, Tumkur District had undertaken the work of planting saplings in the school ground of Government High School, Kodagihalli and infront of

the temple in Kodagihalli, Turuvekere Taluk, Tumkur District and while executing the said work you DGO No.1 to 4 have misappropriated an amount of Rs.46,260/- under NREGA Scheme during the year 2009-10.

You, DGO No.2 Sri. H.K Prakash, DGO No.3 Sri. Umesh K.P and DGO No.4 Sri. Vijayanna have misappropriated an amount of Rs.23,600/- while executing the road development work from Mrasakottige to SC Colony and the work executed by you DGOs is of substandard quality.

You, DGO No.2 to 4 have misappropriated an amount of Rs.31,750/- while executing the road development work from Kalkere to Chinnarikatte and the work executed by you DGOs if of substandard quality.

Further, you DGO No.2 to 4 have misappropriated Rs.25,000/- while executing the road development work from Kalkere Gate to Jogipalya and the work executed by you DGOs is of substandard quality.

Therefore, you DGOs 1 to 4 have failed to maintain absolute integrity and devotion to duty and committed an act which is unbecoming of a Government Servants and therefore you are guilty of misconduct under Rule 3(1)(i) to (iii) of KCS (Conduct) Rules 1966. Hence, this charge.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has '**Partly Proved**' the charges leveled against **DGO No.1**, Shri Siddagangaiah, Forest Guard, Forest Department, Turuvekere, Tumkur District; **DGO No.2**, Shri H.K.Prakash, the then Executive Officer, Taluk Panchayath, Turuvekere Taluk, Tumkur District; **DGO No.3**, Shri Umesh K.P., Assistant Engineer, Zilla Panchayath Division, Turuvekere Taluk, Tumkur District and **DGO No.4**, Shri Vijayanna G.M.,

Secretary, Kodigehalli Grama Panchayath, Turuvekere Taluk, Tumkur District.

5. On perusal of the Inquiry Report, in order to prove the guilt of the DGOs No.1 to 4, the Disciplinary Authority has examined two witnesses i.e., PW-1 and PW-2 and Ex. P-1 to P-32 documents were got marked. DGOs No.1, 3 and 4 were also examined themselves as DW-1 to DW-3 respectively and Ex. D-1 to D-17 documents were got marked.

6. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of the Inquiry Officer.

7. As per the information furnished by the Inquiry Officer, DGO No.1, Shri Siddagangaiah has retired from service on 31/03/2017; DGO No.2, Shri H.K.Prakash will retire from service on 31/07/2024; DGO No.3, Shri Umesh K.P., will retire from service on 30/04/2025 and DGO No.4, Shri Vijayanna G.M., will retire from service on 31/08/2024.

8. Having regard to the nature of charge '**Partly Proved**' against **DGO No.1**, Shri Siddagangaiah, Forest Guard, Forest Department, Turuvekere, Tumkur District; **DGO No.2**, Shri H.K.Prakash, the then Executive Officer, Taluk Panchayath, Turuvekere Taluk, Tumkur District; **DGO No.3**, Shri Umesh K.P., Assistant Engineer, Zilla Panchayath Division, Turuvekere Taluk, Tumkur District and **DGO No.4**, Shri Vijayanna G.M., Secretary, Kodigehalli Grama Panchayath, Turuvekere Taluk, Tumkur District and on consideration of the totality of circumstances:-

> "It is hereby recommended to the Government to impose penalty of withholding 05% of pension payable to DGO No.1, Shri Siddagangaiah, Forest Guard, Forest Department, Turuvekere, Tumkur District for a period of one year".
>
> "It is hereby recommended to the Government to impose penalty of withholding one annual increment payable to DGO No.2, Shri H.K.Prakash, the then Executive Officer, Taluk Panchayath, Turuvekere Taluk, Tumkur District with cumulative effect".
>
> "It is hereby recommended to the Government to impose penalty of withholding one annual increment

payable to DGO No.3, Shri Umesh K.P., Assistant Engineer, Zilla Panchayath Division, Turuvekere Taluk, Tumkur District with cumulative effect".

"It is hereby recommended to the Government to impose penalty of withholding one annual increment payable to DGO No.4, Shri Vijayanna G.M., Secretary, Kodigehalli Grama Panchayath, Turuvekere Taluk, Tumkur District with cumulative effect".

9. Action taken in the matter shall be intimated to this Authority.

Connected records are enclosed herewith.

6/10/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ಉಪಲೋಕ್–2/ಡಿಇ–57/2017 & 197/2017/ಎ.ಆರ್.ಇ–14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು–560001,
ದಿನಾಂಕ: 29/09/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ – (1) **ಶ್ರೀ. ಸಿದ್ದಗಂಗಯ್ಯ,** ಅರಣ್ಯ ರಕ್ಷಕ, ಅರಣ್ಯ ಇಲಾಖೆ, ತುರುವೇಕೆರೆ, ತುಮಕೂರು ಜಿಲ್ಲೆ (2) **ಶ್ರೀ. ಹೆಚ್.ಕೆ ಪ್ರಕಾಶ್,** ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ (3) **ಶ್ರೀ. ಉಮೇಶ್ ಕೆ.ಪಿ,** ಸಹಾಯಕ ಅಭಿಯಂತರರು, ಜಿಲ್ಲಾ ಪಂಚಾಯತ್ ವಿಭಾಗ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು (4) **ಶ್ರೀ. ವಿಜಯಣ್ಣ ಜಿ.ಎಂ,** ಕಾರ್ಯದರ್ಶಿ, ಕೊಡಿಗೇಹಳ್ಳಿ ಗ್ರಾಮ ಪಂಚಾಯತಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**

1. ಕಂಪ್ಲೆಂಟ್/ಉಪಲೋಕ್/ಬಿಡಿ/1863/2012/ಎಆರ್ಇ–6 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 22/10/2016.
2. ಸರ್ಕಾರದ
   - i. ಆದೇಶ ಸಂಖ್ಯೆ: ಅಪಜೀ 177 ಅಇವಿ 2016, ಬೆಂಗಳೂರು, ದಿನಾಂಕ: 19/12/2016.
   - ii. ಆದೇಶ ಸಂಖ್ಯೆ: ಗ್ರಾಅಪ 260 ವಿಸೇಬಿ 2016, ಬೆಂಗಳೂರು ದಿನಾಂಕ: 27/01/2017.
3. ನಾಮನಿರ್ದೇಶನ
   - i. ಸಂಖ್ಯೆ: ಉಪಲೋಕ್–2/ಡಿಇ/57/2017, ಬೆಂಗಳೂರು ದಿನಾಂಕ: 12/01/2017.

ii. ಸಂಖ್ಯೆ: ಉಪಲೋಕ್-2/ಡಿಇ/197/2017,
ಬೆಂಗಳೂರು ದಿನಾಂಕ: 07/02/2017.

* * * * * *

ದೂರುದಾರರಾದ ಶ್ರೀ. **ಚಂದ್ರಶೆಟ್ಟಿ** ಬಿನ್ ಲೇಟ್ ಸಣ್ಣದಿಮ್ಮ ಶೆಟ್ಟಿ, ಕಲ್ಕೆರೆ, ಕೊಡಗಿಹಳ್ಳಿ, ಕಸಬಾ ಹೋಬಳಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ (1) ಶ್ರೀ. **ಸಿದ್ದಗಂಗಯ್ಯ**, ಅರಣ್ಯ ರಕ್ಷಕ, ಅರಣ್ಯ ಇಲಾಖೆ, ತುರುವೇಕೆರೆ, ತುಮಕೂರು ಜಿಲ್ಲೆ (2) ಶ್ರೀ. **ಹೆಚ್.ಕೆ ಪ್ರಕಾಶ್**, ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ (3) ಶ್ರೀ. **ಉಮೇಶ್ ಕೆ.ಪಿ**, ಸಹಾಯಕ ಅಭಿಯಂತರರು, ಜಿಲ್ಲಾ ಪಂಚಾಯತ್ ವಿಭಾಗ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು (4) ಶ್ರೀ. **ವಿಜಯಣ್ಣ ಜಿ.ಎಂ**, ಕಾರ್ಯದರ್ಶಿ, ಕೊಡಿಗೇಹಳ್ಳಿ ಗ್ರಾಮ ಪಂಚಾಯತಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇವರುಗಳ ವಿರುದ್ಧ ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ ತುರುವೇಕರೆ ತಾಲ್ಲೂಕು ಪಂಚಾಯತಿ ವ್ಯಾಪ್ತಿಯ ಕೊಡಿಗೇಹಳ್ಳಿ ಗ್ರಾಮ ಪಂಚಾಯತಿಯಲ್ಲಿ 2009-11 ನೇ ಸಾಲಿನ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂ.ಜಿ.ಎನ್.ಆರ್.ಇ.ಜಿ.ಎ) ಲೆಕ್ಕ ಶೀರ್ಷಿಕೆಯ ಅಡಿ ಕೈಗೊಂಡ ಕಾಮಗಾರಿಗಳಲ್ಲಿ ಅವ್ಯವಹಾರ ಆಗಿರುತ್ತದೆ ಎಂದು ದೂರಿರುತ್ತಾರೆ. ಆದ್ದರಿಂದ, ಆ.ಸ.ನೌ ರವರುಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

ನಂತರ ಸದರಿ ದೂರನ್ನು ಆಪಾದಿಸಿದ ವಿಷಯದ ಬಗ್ಗೆ ತನಿಖೆಯನ್ನು ಮಾಡಿ ತನಿಖಾ ವರದಿಯನ್ನು ಸಲ್ಲಿಸಲು ಈ ಸಂಸ್ಥೆಯಿಂದ ತನಿಖಾಧಿಕಾರಿಗಳನ್ನು ನೇಮಿಸಿದ್ದು, ಶ್ರೀ. ಬಿ ಪ್ರಸನ್ನಕುಮಾರ್, ಸಹಾಯಕ ಅಭಿಯಂತರರು, ತಾಂತ್ರಿಕ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ತನಿಖೆಯನ್ನು ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ.

2. ತದನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 19/12/2016 ಮತ್ತು 27/01/2017 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 12/01/2017 ಮತ್ತು 07/02/2017 ರಂದು ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3) ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ. ನಂತರ ಉಪಲೋಕ್-2/ಡಿಇ-197/2017 ಪ್ರಕರಣವನ್ನು ಉಪಲೋಕ್-2/ಡಿಇ-57/2017 ಜೊತೆಗೆ ಜಂಟಿಯಾಗಿ ವಿಚಾರಣೆ ನಡೆಸಿಕೊಂಡಿದ್ದು ಇರುತ್ತದೆ. ಆ ಪ್ರಕಾರ ಉಪಲೋಕ್-2/ಡಿಇ-57/2017 & 197/2017 ಪ್ರಕರಣವನ್ನು ಜಂಟಿಯಾಗಿ ವಿಚಾರಣೆ ನಡೆಸಲು ಅನುಮೋದನೆ ನೀಡಿರುತ್ತಾರೆ. ತದನಂತರ ಉಪಲೋಕ್-2/ಡಿಇ-57/2017 ರಲ್ಲಿ ವಿಚಾರಣೆ ನಡೆಸಿ ಸಾಕ್ಷಿಗಳನ್ನು ಮಾಡಿಕೊಂಡಿದ್ದು ಮತ್ತು ದಾಖಲಾತಿಗಳನ್ನು ಗುರುತಿಸಿಕೊಂಡಿದ್ದು ಇರುತ್ತದೆ.

3. ನಾಮನಿರ್ದೇಶನದ ಆದೇಶದಂತೆ, **ಆ.ಸ.ನೌ.ರವರುಗಳ ವಿರುದ್ಧ ದೋಷಾರೋಪಣೆ *(Articles of Charge)* ಅನ್ನು ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು,** ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌ-1 ರವರಿಗೆ ದಿನಾಂಕ: 20/01/2017 ರಂದು ಮತ್ತು ಆ.ಸ.ನೌ-2, 3 ಮತ್ತು 4 ರವರಿಗೆ ದಿನಾಂಕ: 12/05/2017 ರಂದು ಮತ್ತು 04/02/2020 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ–1

## ದೋಷಾರೋಪಣೆ–1

While you, DGO No.1 Sri. Siddagangaiah, while working as Forest Guard, Turuvekere Taluk, Tumkur District; DGO No.2 Sri. H.K Prakash, the then Executive Engineer, Taluk Panchayath, Turuvekere Taluk, Tumkur District and DGO No.3 Sri. Umesh K.P, Assistant Engineer, Zilla Panchayath Division, Turuvekere Taluk, Tumkur Distirct and DGO No.4 Sri. Vijayanna G.M, Secretary, Kodagihalli Gram Panchayath, Turuvekere Taluk, Tumkur District had undertaken the work of planting saplings in the school ground of Government High School, Kodagihalli and infront of the temple in Kodagihalli, Turuvekere Taluk, Tumkur District and while executing the said work you DGO No.1 to 4 have misappropriated an amount of Rs.46,260/- under NREGA Scheme during the year 2009-10.

You, DGO No.2 Sri. H.K Prakash, DGO No.3 Sri. Umesh K.P and DGO No.4 Sri. Vijayanna have misappropriated an amount of Rs.23,600/- while executing the road development work from Mrasakottige to SC Colony and the work executed by you DGOs is of substandard quality.

B

You, DGO No.2 to 4 have misappropriated an amount of Rs.31,750/- while executing the road development work from Kalkere to Chinnarikatte and the work executed by you DGOs if of substandard quality.

Further, you DGO No.2 to 4 have misappropriated Rs.25,000/- while executing the road development work from Kalkere Gate to Jogipalya and the work executed by you DGOs is of substandard quality.

1. Therefore, you DGOs 1 to 4 have failed to maintain absolute integrity and devotion to duty and committed an act which is unbecoming of a Government Servants and therefore you are guilty of misconduct under Rule 3(1)(i) to (iii) of KCS (Conduct) Rules 1966. Hence, this charge.

**ಅನುಬಂಧ–2**

**ದೋಷಾರೋಪಣೆಯ ವಿವರ**

**(ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)**

**2. Brief facts of the case are:**

On the complaint filed by Sri Chandrashetty S/o Late Sannadimma Shetty – Kalkere, Kodagihalli Post, Kasaba Hobli, Turuvekere Taluk, Tumkur District (hereinafter

R

referred to as complainant for short) against Sri Jalkrishna – the then Executive Officer, (2) Sri Prakash, the then Executive Officer, (3) Sri Umesh K.P. – Assistant Engineer, (4) Sri Siddagangaiah V., - Assistant Engineer, (5) Smt. Jayamma – Ex. President, Kodagihalli Grama Panchayath, (6) Sri Mahendra – Ex. President and present Member, Kodagihalli Grama Panchayath, (7) Sri Honnappa H.A. – Ex.President and Present Member, Kodagihalli Grama Panchayath, (8) Smt. Jayamma – Ex. President, Kodagihalli Grama Panchayath, (9) Sri Vijayanna. G.M. – Secretary – Kodagihalli Grama Panchayath, (10) Smt. Savithramma H.R. – Secretary, Kodagihalli Grama Panchayath and (11) Sri Ranganatha H.S. – Bill Collector, Kodagihalli Grama Panchayath belonging to Turuvekere Taluk, Tumkur District and alleging that they, being Public/ Government servants, have committed misconduct, an investigation has been taken up u/s 9 of the Karnataka Lokayukta Act 1984.

3. According to the complainant: Respondents have misappropriated the funds under NREGA Scheme during the year 2009-2011 in the name of undertaking the works in the limits of Kodagihalli Grama Panchayath of Turuvekere Taluk.

4. The CE, TAC, Karnataka Lokayukta was asked to investigate and submit report Sri. B Prasanna Kumar – Assistant Engineer-2 in TAC submitted report dated: 20/12/2013. According to the said report:

   i. **Relating to the work of planting saplings in the ground of Kodagihalli Government High School and in front of temple** an amount of Rs.46,260/- was found misappropriated for which R-13 Siddagangaiah, R-12 Sri. S Marulappa, R-9 Sri. Vijayanna, R-10 Sri. B Mahendra and R-2 Sri. H.K Prakash were responsible.

   ii. **Road development work from Mrasakottige to SC Colony** an amount of Rs.23,600/- is found misappropriated on account of substandard work for which R-3 K.P Umesh, R-9 G.M Vijayanna, R-6 Sri. D Mahendra and R-2 Sri. H.K Prakash are found responsible.

   iii. **Development work of the road from Kalkere village to Chinnarikatte** an amount of Rs.31,750/- was found misappropriated on account of substandard works for which R-3 K.P Umesh, R-9 G.M Vijayanna, R-6 Sri. D Mahendra and R-2 Sri. H.K Prakash are found responsible.

   iv. **Road development from Kalkere gate to Jogipalya road** an amount of Rs.25,000/- is

found misappropriated an account of substandard work for which R-3 K.P Umesh, R-9 G.M Vijayanna, R-6 Sri. D Mahendra and R-2 Sri. H.K Prakash are found responsible.

5. Since the said facts and materials on record prima facie show that Sriyuths: (1) Sri. Siddagangaiah (2) H.K.Prakash (3) Umesh K.P and (4) Vijayanna G.M have committed misconduct under Rule 3(1) of KCS (Conduct) Rules, 1966 recommendation is made under section 12(3) of Karnataka Lokayukta Act, 1984 to the Competent Authority to initiate disciplinary proceedings against (1) Sri. Siddagangaiah (2) H.K.Prakash (3) Umesh K.P and (4) Vijayanna G.M and to entrust the inquiry to this Authority under Rule 14-A of Karnataka Civil Service (Classifications, Control and Appeal) Rules, 1957. Hence, the charge.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ–1 ರವರು ದಿನಾಂಕ: 10/10/2017 ರಂದು ಹಾಜರಾಗಿದ್ದು; ಆ.ಸ.ನೌ–2 ರವರು ದಿನಾಂಕ: 04/03/2020 ರಂದು ಹಾಜರಾಗಿದ್ದು; ಆ.ಸ.ನೌ–3 ರವರು ದಿನಾಂಕ: 03/02/2021 ರಂದು ಹಾಜರಾಗಿದ್ದು ಮತ್ತು ಆ.ಸ.ನೌ–4 ರವರು ದಿನಾಂಕ: 10/10/2017 ರಂದು ಹಾಜರಾಗಿದ್ದು; ಆ.ಸ.ನೌರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರುಗಳು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌರವರುಗಳಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

6. ಈ ವಿಚಾರಣೆಯಲ್ಲಿ ತಿದ್ದುಪಡಿ ಮಾಡಲಾದ ದೋಷಾರೋಪಣೆಗೆ ಆ.ಸ.ನೌ–1 ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ತಮ್ಮ ಲಿಖಿತ ಹೇಳಿಕೆಯಲ್ಲಿ ಸಾಮಾಜಿಕ ಅರಣ್ಯ ವಲಯ, ತುರುವೇಕೆರೆಯಲ್ಲಿ ವನಪಾಲಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾಗ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆ ಅಡಿಯಲ್ಲಿ ಸರ್ಕಾರಿ ಪ್ರೌಢ ಶಾಲೆ ಮತ್ತು ದೇವಸ್ಥಾನದ ಮುಂಭಾಗದಲ್ಲಿ ತನ್ನ ಮೇಲಾಧಿಕಾರಿಗಳ ಆದೇಶದಂತೆ ತಮ್ಮ ಇಲಾಖೆಯ ಪದ್ದತಿಯಂತೆ ತಾಂತ್ರಿಕತೆಯನ್ನು ಅನುಸರಿಸಿ 2009–10 ರಲ್ಲಿ ಸಸಿಗಳನ್ನು ವಿತರಣೆ ಮಾಡಿ ನಡೆಸಿರುತ್ತೇನೆ ಅಂತಾ ಹೇಳಿರುತ್ತಾರೆ. ಈ ಕೆಲಸಕ್ಕಾಗಿ ಕೂಲಿಕಾರರ ಪಟ್ಟಿ ಹಾಗೂ ಕೂಲಿಕಾರರಿಗೆ ಹಣವನ್ನು ಬಿಡುಗಡೆ ಮಾಡುವುದು ಗ್ರಾಮ ಪಂಚಾಯಿತಿಯವರ ಕರ್ತವ್ಯವಾಗಿದ್ದು, ಇದರಲ್ಲಿ ತನ್ನದೇನು ಪಾತ್ರ ಇರುವುದಿಲ್ಲ ಅಂತಾ ಹೇಳಿರುತ್ತಾರೆ. ದೋಷಾರೋಪಣೆಯಲ್ಲಿ ಹೇಳಿರುವ ಎಲ್ಲಾ ವಿಷಯಗಳನ್ನು ಅಲ್ಲಗಳೆದಿದ್ದು ಮತ್ತು ಅದರಲ್ಲಿ ಹೇಳಿದ ವಿಷಯಗಳು ಸತ್ಯಕ್ಕೆ ದೂರವಾಗಿದ್ದು ಇರುತ್ತದೆ ಅಂತಾ ಹೇಳಿರುತ್ತಾರೆ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

7. ಆ.ಸ.ನೌ–2 ರವರು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

8. ಆ.ಸ.ನೌ–3 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ 2009–10ನೇ ಸಾಲಿನಿಂದ 2010–11ನೇ ಅವಧಿಯಲ್ಲಿ ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಅನುಷ್ಠಾನಗೊಂಡ ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆ ಕಾಮಗಾರಿಗಳನ್ನು ಮೇಲುಸ್ತುವಾರಿಯಾಗಿ ಮೇಲಾಧಿಕಾರಿಗಳ ಆದೇಶದಂತೆ ಕರ್ತವ್ಯ ನಿರ್ವಹಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ಸರ್ಕಾರಿ ಪ್ರೌಢಶಾಲೆಯ ಮೈಧಾನದಲ್ಲಿ ಸಸಿ ನೆಡುವ ಕಾಮಗಾರಿಯ ಅನುಷ್ಠಾನದಲ್ಲಿ ಹಣ

8

ದುರುಪಯೋಗಕ್ಕೆ ಕಾರಣಕರ್ತನೆಂದು ತನಿಖಾಧಿಕಾರಿಗಳು ಸಲ್ಲಿಸಿರುವ ವರದಿ ನ್ಯಾಯ ಸಮ್ಮತವಾಗಿರುವುದಿಲ್ಲ ಅಂತಾ ಹೇಳಿರುತ್ತಾರೆ. ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ನಿಯಮಾನುಸಾರ 2009–10ನೇ ಸಾಲಿನಿಂದ ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಗಳಂತೆ ಭೌತಿಕ ಮತ್ತು ಆರ್ಥಿಕ ನಿಗದಿಪಡಿಸಿರುವಂತೆ ಕ್ರಿಯಾ ಯೋಜನೆಯನ್ನು ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಲ್ಲಿ ನೊಂದಾಯಿಸಿರುವ ಕಾಮಗಾರಿಗಳನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅನುಮೋದಿಸಿರುವಂತೆ ಕಾಮಗಾರಿಗಳನ್ನು ನಿರ್ವಹಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ಮುಂದುವರೆದು ಕಾಮಗಾರಿಗಳಿಗೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಕಾರ್ಯಕ್ರಮಾಧಿಕಾರಿಗಳು ಗಣಕೀಕೃತ ದಾಖಲೆಗಳಂತೆ ಅಂತರ್ಜಾಲದಲ್ಲಿ ಅನುಮೋದಿಸಿದ ಎಂ.ಐ.ಎಸ್‌ನಲ್ಲಿ ಅನುದಾನ ನೋಂದಾಯಿತ ಹಾಜರಾತಿ ಉದ್ಯೋಗ ಚೀಟಿದಾರರಿಗೆ ಎನ್.ಎಂ.ಆರ್‌ನಲ್ಲಿ ದಾಖಲಿಸಿ ಹಾಗೂ ಸರಬರಾಜುದಾರರ ಸಾಮಗ್ರಿಗಳ ಸರಬರಾಜಿಗೆ ಸಂಬಂಧಿಸಿದಂತೆ ಹಿರಿಯ ಅಭಿಯಂತರರು ಸಲ್ಲಿಸಿರುವ ಬಿಲ್ಲುಗಳಂತೆ ಅನುದಾನ ಬ್ಯಾಂಕ್ ಖಾತೆಗಳಿಗೆ ಅಧ್ಯಕ್ಷರ ಜಂಟಿ ಸಹಿಯೊಂದಿಗೆ ಬಿಡುಗಡೆ ಮಾಡಿದ್ದು, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

9. ಆ.ಸ.ನೌ–4 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳು ನಿಯಮಾನುಸಾರ 2009–10ನೇ ಸಾಲಿನಿಂದ ಸರ್ಕಾರ ನಿಗದಿಪಡಿಸಿರುವ ಮಾರ್ಗಸೂಚಿಗಳಂತೆ ಭೌತಿಕ ಮತ್ತು ಆರ್ಥಿಕ ನಿಗದಿಪಡಿಸಿರುವಂತೆ ಕ್ರಿಯಾ ಯೋಜನೆಯನ್ನು ವಾರ್ಡ್ ಸಭೆ ಮತ್ತು ಗ್ರಾಮ ಸಭೆಗಳಲ್ಲಿ ನೊಂದಾಯಿಸಿರುವ ಕಾಮಗಾರಿಗಳನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅನುಮೋದಿಸಿರುವಂತೆ ಕಾಮಗಾರಿಗಳನ್ನು ನಿರ್ವಹಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ಮುಂದುವರೆದು ಕಾಮಗಾರಿಗಳಿಗೆ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ತಾಲ್ಲೂಕು ಮಟ್ಟದ ಕಾರ್ಯಕ್ರಮಾಧಿಕಾರಿಗಳು ಗಣಕೀಕೃತ ದಾಖಲೆಗಳಂತೆ ಅಂತರ್ಜಾಲದಲ್ಲಿ ಅನುಮೋದಿಸಿದ ಎಂ.ಐ.ಎಸ್‌ನಲ್ಲಿ ಅನುದಾನ ನೋಂದಾಯಿತ ಹಾಜರಾತಿ ಉದ್ಯೋಗ ಚೀಟಿದಾರರಿಗೆ ಎನ್.ಎಂ.ಆರ್‌ನಲ್ಲಿ ದಾಖಲಿಸಿ ಹಾಗೂ

ಸರಬರಾಜುದಾರರ ಸಾಮಗ್ರಿಗಳ ಸರಬರಾಜಿಗೆ ಸಂಬಂಧಿಸಿದಂತೆ ಹಿರಿಯ ಅಭಿಯಂತರರು ಸಲ್ಲಿಸಿರುವ ಬಿಲ್ಲುಗಳಂತೆ ಅನುದಾನ ಬ್ಯಾಂಕ್ ಖಾತೆಗಳಿಗೆ ಅಧ್ಯಕ್ಷರ ಜಂಟಿ ಸಹಿಯೊಂದಿಗೆ ಬಿಡುಗಡೆ ಮಾಡಿದ್ದು, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ. ಮುಂದುವರೆದು ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯವರು ದಿನಾಂಕ: 28/02/2007 ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ನರೇಗಾ ಯೋಜನೆಯಲ್ಲಿ ತಾಲ್ಲೂಕು ಸಮನ್ವಯ ಅಧಿಕಾರಿಗಳು ಶೇ.100% ತಪಾಸಣೆ ಮಾಡಿ ಅನುದಾನ ಬಿಡುಗಡೆ ಮಾಡಲು ಅನುಮತಿ ನೀಡಬೇಕಾಗಿರುತ್ತದೆ. ಜಿಲ್ಲಾ ಮಟ್ಟದ ಸಮನ್ವಯ ಅಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಶೇ.10% ಮತ್ತು ಸರ್ಕಾರದ ಉನ್ನತ ಮಟ್ಟದ ನರೇಗಾ ಯೋಜನೆಯ ಕಾಮಗಾರಿಗಳನ್ನು ಶೇ.2% ಪರಿಶೀಲಿಸಲು ಮತ್ತು ಅನುದಾನ ಬಿಡುಗಡೆ ಮಾಡಲು ಸೂಚಿಸಿರುತ್ತಾರೆ.

10. ಮುಂದುವರೆದು ಗ್ರಾಮ ಪಂಚಾಯತಿ ಅಧ್ಯಕ್ಷರು ನಿಯಮಾನುಸಾರ ನಮೂನೆ-1ರಲ್ಲಿ ಉದ್ಯೋಗ ಚೀಟಿ ಬೇಡಿಕೆಗಾಗಿ ಸಲ್ಲಿಸಿರುವ ವಿವರಗಳನ್ನು ಪರಿಶೀಲಿಸಿ ಉದ್ಯೋಗ ಚೀಟಿಗಳನ್ನು ಅಧಿಕಾರವಿದ್ದು, ನಂತರ ಕೆಲಸದ ಬೇಡಿಕೆಗೆ ನಮೂನೆ-6, 8 ಮತ್ತು 9 ನಿರ್ವಹಿಸುವುದು ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಮತ್ತು ಮೇಟ್ ರವರ ಕರ್ತವ್ಯವಾಗಿದ್ದು, ಇದರಂತೆ ತಾವು ನಮೂನೆಗಳಲ್ಲಿ ದಾಖಲಿಸಿ ಅನುಮೋದನೆ ಪಡೆದುಕೊಂಡಿರುತ್ತೇನೆ ಅಂತಾ ಹೇಳಿರುತ್ತಾರೆ. ಆದ್ದರಿಂದ, ತಾನು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

11. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ 23 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ತನಿಖಾಧಿಕಾರಿಗಳಾದ ಶ್ರೀ. ಬಿ ಪ್ರಸನ್ನಕುಮಾರ, ಸಹಾಯಕ ಅಭಿಯಂತರರು, ಟಿ.ಎ.ಸಿ ರವರನ್ನು ಪಿ.ಡಬ್ಲ್ಯೂ.2 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.24 ರಿಂದ 32 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ-1 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ

ನುಡಿದಿದ್ದು, ನಿ.ಡಿ.1 ರಿಂದ 4 ಮತ್ತು ನಿ.ಡಿ.1(ಎ) ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–3 ರವರು ತಮ್ಮನ್ನು ಡಿ.ಡಬ್ಲ್ಯೂ.2 ಎಂದು ತಮ್ಮ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತಾರೆ. ಆ.ಸ.ನೌ–4 ರವರು ತಮ್ಮನ್ನು ಡಿ.ಡಬ್ಲ್ಯೂ.3 ಎಂದು ತಮ್ಮ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ನಿ.ಡಿ.5 ರಿಂದ 17 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ–2 ರವರು ಸಾಕ್ಷಿಯನ್ನು ಮಾಡಿಸಿರುವುದಿಲ್ಲ.

12. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರುಗಳು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

13. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

14. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

15. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಭಾಗಶಃ ಸಕರಾತ್ಮಕವಾಗಿ**
**ಅಂಶ 2: ಭಾಗಶಃ ಸಕರಾತ್ಮಕವಾಗಿ**
**ಅಂಶ 3: ಭಾಗಶಃ ಸಕರಾತ್ಮಕವಾಗಿ**
**ಅಂಶ 4: ಭಾಗಶಃ ಸಕರಾತ್ಮಕವಾಗಿ**
**ಅಂಶ 5: ಅಂತಿಮ ಆದೇಶದಂತೆ.**

## ಕಾರಣಗಳು

16. ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿಗೆ ಸೇರಿದ ಕೋಟಾರಕೊಟ್ಟಿಗೆ, ಸುಳ್ಳೆಕೇರೆ, ಟಿ. ಹೊಸಳ್ಳಿ, ಹಾವಾಡ, ಚಿಕ್ಕತುರುವೇಕೆರೆ, ಜೋಗಿಪಾಳ್ಯ ಗ್ರಾಮಗಳಿಗೆ ಸಂಬಂಧಿಸಿದ ನರೇಗಾ ಯೋಜನೆ ಅಡಿಯಲ್ಲಿ ರಸ್ತೆಯ ಕಳಪೆ ಕಾಮಗಾರಿ ಮಾಡಿದ ಬಗ್ಗೆ ದೂರನ್ನು ಸಲ್ಲಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ಸದರಿ ಯೋಜನೆ ಅಡಿಯಲ್ಲಿ ಕೂಲಿ ಕಾರ್ಮಿಕರಿಗೆ ಜಾಬ್ ಕಾರ್ಡ್ ಮಾಡದೇ ಶ್ರೀಮಂತರ ಹೆಸರಿನಲ್ಲಿ ಜಾಬ್ ಕಾರ್ಡ್‌ನ್ನು ಮಾಡಿ ಹಣವನ್ನೆಲ್ಲಾ ಶ್ರೀಮಂತರ ಖಾತೆಗೆ ಜಮಾ ಮಾಡಿರುತ್ತಾರೆ, ಬಡ ಕೂಲಿ ಕಾರ್ಮಿಕರಿಗೆ ಯಾವುದೇ ಹಣ ಕೊಟ್ಟಿರುವುದಿಲ್ಲ. ನಿ.ಪಿ.1 ದೂರು; ನಿ.ಪಿ.2 ಮತ್ತು 3 ಫಾರಂ ನಂ.1 ಮತ್ತು 2. ದೂರನ್ನು ಸಲ್ಲಿಸಿದ ನಂತರ ಸ್ಥಳ ಪರಿಶೀಲನೆಗೆ ಈ ಇಲಾಖೆಯಿಂದ ಪ್ರಸನ್ನಕುಮಾರ್ ಇವರು ಭೇಟಿ ನೀಡಿ ಪರಿಶೀಲನೆ ಮಾಡಿರುತ್ತಾರೆ. ಸದರಿ ತನಿಖಾಧಿಕಾರಿಗಳು ಬಂದಾಗ ತಾನು ಹಾಜರಿದ್ದು, ಕಾಮಗಾರಿಗಳ ಬಗ್ಗೆ ಸ್ಥಳವನ್ನು ತೋರಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ನರೇಗಾ ಯೋಜನೆ ಅಡಿಯಲ್ಲಿ ಬೇರೆ ಬೇರೆ 20 ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಪಿ.4 ರಿಂದ 23 ಎಂದು ಗುರುತಿಸಿಕೊಂಡಿರುತ್ತಾರೆ.

17. ತನಿಖಾಧಿಕಾರಿಗಳು ಪಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿದ್ದು, ಸದರಿಯವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾಂತ್ರಿಕ ವಿಭಾಗದ ಮುಖ್ಯ ಅಭಿಯಂತರರು ದಿನಾಂಕ: 02/02/2013 ರಂದು ತನಿಖೆಯನ್ನು ಕೈಗೊಳ್ಳುವಂತೆ ಸೂಚಿಸಿದ್ದು, ಆ ಪ್ರಕಾರ ಸಂಬಂಧಪಟ್ಟವರಿಗೆ ನಿ.ಪಿ.24 ಮತ್ತು 25 ರಂತೆ ನೋಟಿಸನ್ನು ಕೊಟ್ಟು, ದಿನಾಂಕ: 30/08/2013 ರಂದು ತನಿಖೆಯ ಸಲುವಾಗಿ ಕೊಡಿಗೇಹಳ್ಳಿ ಗ್ರಾಮ ಪಂಚಾಯತಿಗೆ ಭೇಟಿ ನೀಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಮುಂದುವರೆದು ಒಟ್ಟಾರೆ 23 ಕಾಮಗಾರಿಗಳಲ್ಲಿ ದಿನಾಂಕ: 30/08/2013 ಹಾಗೂ 31/08/2013 ರಂದು ತಪಾಸಣೆ ಮಾಡಿದ್ದು, ಆ ಸಮಯದಲ್ಲಿ 4 ಕಾಮಗಾರಿಗಳಲ್ಲಿ ಅವ್ಯವಹಾರ

ನಡೆದಿರುವುದು ಕಂಡುಬಂದಿದ್ದು, ಈ ಬಗ್ಗೆ ನಿ.ಪಿ.26 ಮತ್ತು 27 ರಂತೆ ಮಹಜರ್ ಮಾಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಮುಂದುವರೆದು ತಮ್ಮ ಸಾಕ್ಷಿಯಲ್ಲಿ ಮೇಲಿನ ಕಾಮಗಾರಿಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ತುರುವೇಕೆರೆ ಇವರುಗಳಿಂದ ಅನುಷ್ಠಾನ ಅಧಿಕಾರಿಗಳ ವಿವರಗಳನ್ನು ದಿನಾಂಕ: 16/03/2013ರ ಪತ್ರದಲ್ಲಿ ನಿ.ಪಿ.28 ರಂತೆ ಪಡೆದುಕೊಂಡಿದ್ದು, ಅದರ ಜೊತೆಗೆ ಸಲ್ಲಿಸಿದ ಅನುಬಂಧವನ್ನು ನಿ.ಪಿ.29 ಎಂದು ಗುರುತಿಸಿಕೊಂಡಿರುತ್ತಾರೆ. ಸ್ಥಳ ತಪಾಸಣಾ ಸಮಯದಲ್ಲಿ ಮೇಲಿನ ಕಾಮಗಾರಿಗಳ ಸಂಬಂಧ ಕಾಮಗಾರಿಯ ಪೂರ್ವ, ಕಾಮಗಾರಿ ನಡೆಯುತ್ತಿರುವಾಗ ಹಾಗೂ ಕಾಮಗಾರಿ ಮುಗಿದ ಮೇಲೆ ಛಾಯಾಚಿತ್ರಗಳು ಕಡತದಲ್ಲಿ ಇಲ್ಲದೇ ಇರುವುದನ್ನು ಗಮನಿಸಿದ್ದು, ಮುಂದುವರೆದು ಸ್ಥಳ ತಪಾಸಣಾ ಸಮಯದಲ್ಲಿ ತಪಾಸಣೆಯ ಪ್ರಕ್ರಿಯೆಯನ್ನು ವಿಡಿಯೋ ಮಾಡಿದ್ದು, ಅದನ್ನು ನಿ.ಪಿ.30 ಎಂದು ಗುರುತಿಸಿಕೊಂಡಿದ್ದು ಹಾಗೂ ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ 11 ಛಾಯಾಚಿತ್ರಗಳನ್ನು ನಿ.ಪಿ.31 ಎಂದು ಗುರತಿಸಿಕೊಂಡಿರುತ್ತಾರೆ. ನಂತರ ತನಿಖೆಯನ್ನು ಮಾಡಿ ನಿ.ಪಿ.32 ರಂತೆ ವರದಿಯನ್ನು ಸಲ್ಲಿಸಿರುತ್ತಾರೆ.

18. ಈ ವಿಚಾರಣೆಯಲ್ಲಿ ಆ.ಸ.ನೌ–1, 3 ಮತ್ತು 4 ಇವರು ಡಿ.ಡಬ್ಲ್ಯೂ.1, 3 ಮತ್ತು 4 ಎಂದು ಸಾಕ್ಷಿ ನುಡಿದಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ರಕ್ಷಣಾ ಹೇಳಿಕೆಯಲ್ಲಿ ಹೇಳಿದ ವಿಷಯವನ್ನೇ ಹೇಳಿರುತ್ತಾರೆ.

19. **ದೋಷಾರೋಪಣೆ ಅಂಶ–1**ರ ಪ್ರಕಾರ ಆ.ಸ.ನೌ–1 ರಿಂದ 4 ಇವರು ಕೊಡಿಗೇಹಳ್ಳಿ ಸರ್ಕಾರಿ ಪ್ರೌಢಶಾಲೆ ಆವರಣ ಮತ್ತು ದೇವಾಲಯದ ಎದುರುಗಡೆ ಗಿಡ ನೆಡುವ ಕಾಮಗಾರಿಯನ್ನು ಕೈಗೆತ್ತಿಕೊಂಡಿದ್ದು, ಆದರೆ ಆ.ಸ.ನೌ–1 ರಿಂದ 4 ಇವರು ಈ ಕಾಮಗಾರಿಯನ್ನು ಮಾಡದೇ ಹಣ ದುರುಪಯೋಗಪಡಿಸಿಕೊಂಡಿದ್ದು, ಅದಕ್ಕಾಗಿ ಎಲ್ಲರೂ ಸೇರಿ ರೂ.46,260/– ಗಳಿಗೆ ಜವಾಬ್ದಾರರಾಗಿರುತ್ತಾರೆ ಅಂತಾ ಆರೋಪಣೆ ಮಾಡಿದ್ದು ಇರುತ್ತದೆ. ಆ.ಸ.ನೌ–1 ಇವರು ತಮ್ಮ ಡಿ.ಡಬ್ಲ್ಯೂ.1 ಎಂದು ಸಾಕ್ಷಿ ಮಾಡಿಸಿದ್ದು, ಇವರು ತಮ್ಮ ಪಾಟಿಸವಾಲಿನಲ್ಲಿ ಇವರ ಕರ್ತವ್ಯ ಕೇವಲ ಸಸಿಗಳನ್ನು ಮಾತ್ರ ನಾಟಿ ಮಾಡುವುದಾಗಿದ್ದು, ಅವುಗಳ ನಿರ್ವಹಣೆ ಭಾರ

ನೋಡಿಕೊಳ್ಳುವ ಜವಾಬ್ದಾರಿ ತಮ್ಮದು ಆಗಿರಲಿಲ್ಲ ಅಂತಾ ನುಡಿದಿರುತ್ತಾರೆ. ಮುಂದುವರೆದು ಕೊಡಿಗೇಹಳ್ಳಿ ಸರ್ಕಾರಿ ಪ್ರೌಢಶಾಲೆ ಮತ್ತು ದೇವಸ್ಥಾನಕ್ಕೆ ಸಸಿಗಳನ್ನು ಇವರ ಕಛೇರಿಯಿಂದ ತಮ್ಮ ಮೇಲಾಧಿಕಾರಿಗಳ ಆದೇಶದಂತೆ ಪೂರೈಸಿರುತ್ತೇನೆ ಅಂತಾ ನುಡಿದಿರುತ್ತಾರೆ. ಆದ್ದರಿಂದ ತಾನು ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದಿಲ್ಲ ಅಂತಾ ನುಡಿದಿರುತ್ತಾರೆ. ಆ.ಸ.ನೌ–1 ಇವರು ಮೇಲೆ ಹೇಳಿದ ಕಾಮಗಾರಿಗೆ ಸಂಬಂಧಪಟ್ಟಂತೆ ಅಳತೆ ಪುಸ್ತಕವನ್ನು ಹಾಜರುಪಡಿಸಿದ್ದು, ಅದನ್ನು ನಿ.ಡಿ.1 ರಿಂದ 4 ಅಂತಾ ಗುರುತಿಸಲಾಗಿದ್ದು, ಸದರಿ ಅಳತೆ ಪುಸ್ತಕಕ್ಕೆ ಆ.ಸ.ನೌ–1 ಇವರು, ವಲಯ ಅರಣ್ಯಾಧಿಕಾರಿ, ಸಾಮಾಜಿಕ ಅರಣ್ಯ ವಲಯ, ತುರುವೇಕೆರೆ ಹಾಗೂ ಆ.ಸ.ನೌ–4 ಇವರು ಸಹಿ ಮಾಡಿರುತ್ತಾರೆ. ನಿ.ಡಿ.1ರ ಪ್ರಕಾರ 300 ಸಸಿಗಳನ್ನು ನೆಡೆಸುವುದು ಅದಕ್ಕಾಗಿ ತಗ್ಗುಗಳನ್ನು ತೆಗೆದು ಅದಕ್ಕೆ ನೀರು ಹಾಕುವುದು ಇದ್ದು, ಇದಕ್ಕೆ ಒಟ್ಟು ರೂ.36,702/– ಗಳನ್ನು ಖರ್ಚು ಮಾಡಲಾಗಿದೆ ಅಂತಾ ನಮೂದು ಇರುತ್ತದೆ. ನಿ.ಡಿ.3 ಇದು ಸಸಿಗಳನ್ನು ನೆಡೆಸುವ ಅಂದಾಜುಪಟ್ಟಿ ಇದ್ದು, ಇದರ ಪ್ರಕಾರ ಸಸಿಗಳನ್ನು ನೆಡೆಸಲು ತಗ್ಗು ತೋಡಿ ನೀರನ್ನು ಹಾಕಲು ಒಟ್ಟು ರೂ.77,000/– ಅಂದಾಜುಪಟ್ಟಿ ಮಾಡಲಾಗಿದೆ. ನಿ.ಡಿ.3ಕ್ಕೆ ಆ.ಸ.ನೌ–1, 4 ಹಾಗೂ ವಲಯ ಅರಣ್ಯಾಧಿಕಾರಿಗಳು ಸಹಿಯನ್ನು ಮಾಡಿರುತ್ತಾರೆ. ನಿ.ಡಿ.5 ಇದು ಕಾರ್ಯದರ್ಶಿ, ಕೊಡಿಗೇಹಳ್ಳಿ ಗ್ರಾಮ ಪಂಚಾಯತಿ, ತುರುವೇಕೆರೆ ಇವರು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ತುರುವೇಕೆರೆ ಇವರಿಗೆ ದಿನಾಂಕ: 15/01/2011 ರಂದು, 2009–10ನೇ ಸಾಲಿನ ಕಾಮಗಾರಿಗಳನ್ನು ಅಳತೆ ಪುಸ್ತಕದಲ್ಲಿ ದಾಖಲು ಆಗಿರುವ ಹಾಗೆ ಬಿಲ್ಲು ಪಾವತಿಸಲು ಆದೇಶಿಸಬೇಕೆಂದು ಕೇಳಿಕೊಂಡಿದ್ದು ಇರುತ್ತದೆ. ಆ.ಸ.ನೌ–4 ಪ್ರಕಾರ ಸದರಿ ದಾಖಲಾತಿಯ ಮೇಲೆ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿ ಹಣ ಪಾವತಿಸಲು ಆದೇಶಿಸಿರುತ್ತಾರೆ ಅಂತಾ ಹೇಳಿರುತ್ತಾರೆ. ಸದರಿ ದಾಖಲಾತಿಯನ್ನು ಪರಿಶೀಲಿಸಿದಾಗ ಅದರ ಮೇಲೆ ಕಾಮಗಾರಿಯು ಪೂರ್ಣಗೊಂಡಲ್ಲಿ ಹಾಗೂ ನರೇಗಾ ಇದ್ದಲ್ಲಿ ಹಣ ಪಾವತಿಸಿ ಅಂತಾ ನಮೂದು ಇರುತ್ತದೆ.

20.ತನಿಖಾಧಿಕಾರಿಗಳು ತನಿಖೆಯನ್ನು ಮಾಡಿ ನಿ.ಪಿ.32 ರಂತೆ ವರದಿಯನ್ನು ಸಲ್ಲಿಸಿದ್ದು, ಅದರ ಜೊತೆಗೆ ಅನುಬಂಧ–1 ಮತ್ತು 2ನ್ನು ಸಲ್ಲಿಸಿದ್ದು, ಅದರಲ್ಲಿ ಈ ಕಾಮಗಾರಿ ಬಗ್ಗೆ ಸ್ಥಳ

ಪರಿಶೀಲನೆ ಸಮಯದಲ್ಲಿ ಕಂಡುಬಂದ ಅಂಶಗಳನ್ನು ಕಾಲಂ ನಂ.14 ರಲ್ಲಿ ನಮೂದಿಸಿರುತ್ತಾರೆ. ಕಾಲಂ ನಂ.14ರಲ್ಲಿ ಸ್ಥಳ ಪರಿಶೀಲನೆ ಸಮಯದಲ್ಲಿ ಹಾಗೂ ಎದುರುದಾರರು ಸಲ್ಲಿಸಿದ ಛಾಯಾಚಿತ್ರಗಳನ್ನು ಗಮನಿಸಲಾಗಿ, ಸದರಿ ಕಾಮಗಾರಿಯನ್ನು ಕೊಡಿಗೇಹಳ್ಳಿ ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿ ಗಿಡ ನೆಡುವ ಕಾಮಗಾರಿಯನ್ನು ಕೈಗೊಂಡಿದ್ದು, ಆದರೆ ಪ್ರಸ್ತುತ ಸದರಿ ಜಾಗದಲ್ಲಿ ಅಲ್ಲೊಂದು ಇಲ್ಲೊಂದು ಗಿಡಗಳು ಕಂಡುಬಂದಿದ್ದು ಹೊರತು ಬಹುತೇಕ ಗಿಡಗಳು ಸ್ಥಳದಲ್ಲಿ ಕಂಡಬರದೇ ಇರುತ್ತದೆ. ಈ ಬಗ್ಗೆ ಎದುರುದಾರರನ್ನು ಕೇಳಲಾಗಿ ಸದರಿಯವರು ಕೇವಲ ತಾವು ಗಿಡ ಮಾತ್ರ ನೆಟ್ಟಿರುವುದಾಗಿ ತಿಳಿಸಿ, ಇದಕ್ಕೆ ಒಟ್ಟಾರೆ ಅಂದಾಜು ಮೊತ್ತ ರೂ.77,000/– ಗಳಾಗಿದ್ದು, ರೂ.46,264/– ಗಳ ಖರ್ಚಾಗಿದೆ ಎಂದು ತಿಳಿಸಿ, ನೀರು ಹಾಕಿ ಪಾಲನೆ ಪೋಷನೆ ಮಾಡಲು ನಿಗದಿಪಡಿಸಿದ ಹಣವನ್ನು ಖರ್ಚು ಮಾಡದೇ ಇರುವುದು ಸ್ಥಳದಲ್ಲಿ ಕಂಡುಬಂದಿದ್ದು, ಇದರಿಂದಾಗಿ ನೆಡಲಾದ 300 ಗಿಡಗಳ ಪೈಕಿ ಬಹುತೇಕ ಗಿಡಗಳು ನಿರ್ವಹಣೆ ಇಲ್ಲದೇ ಹಾಳಾಗಿದೆ ಎಂದು ಭಾವಿಸಿದ್ದು, ಆದರೆ ಈ ನಿರ್ವಹಣೆ ಅರಣ್ಯ ಇಲಾಖೆಯವರು ಅಥವಾ ಗ್ರಾಮ ಪಂಚಾಯತಿಯವರೇ ನಿರ್ವಹಣೆ ಮಾಡಬೇಕಾಗಿತ್ತು ಎಂಬುದು ಎದುರುದಾರರಿಂದ ತಿಳಿದು ಬರದೇ ಇದ್ದು ಇದಕ್ಕೆ ಆ.ಸ.ನೌ–1, 2, 4 ಮತ್ತು ಶ್ರೀ. ಎಸ್ ಮರಳಪ್ಪ, ಅರಣ್ಯಾಧಿಕಾರಿಗಳು, ಶ್ರೀ. ಡಿ ಮಹೇಂದ್ರ, ಅಧ್ಯಕ್ಷರು ಈ ಕಾಮಗಾರಿಯ ಅನುಷ್ಠಾನ ಹಾಗೂ ಪಾವತಿಗೆ ಜವಾಬ್ದಾರಿ ಆಗಿರುತ್ತಾರೆ ಅಂತಾ ವರದಿಯಲ್ಲಿ ಸಲ್ಲಿಸಿರುತ್ತಾರೆ.

21. ಆ.ಸ.ನೌ–2 ಇವರು ಈ ವಿಚಾರಣೆಯಲ್ಲಿ ಹಾಜರಾಗಿದ್ದರೂ ಸಹಿತ ಅವರು ಪಿ.ಡಬ್ಲ್ಯೂ.1 ಮತ್ತು 2 ಇವರಿಗೆ ಪಾಟಿಸವಾಲನ್ನು ಮಾಡಿರುವುದಿಲ್ಲ ಹಾಗೂ ತಮ್ಮ ಸಾಕ್ಷಿಯನ್ನು ಮಾಡಿಸಿರುವುದಿಲ್ಲ. ಆ.ಸ.ನೌ–3 ಇವರು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಶ್ರೀಮತಿ. ಸಾವಿತ್ರಮ್ಮ ಇವರು ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ 3 ಕಾಮಗಾರಿಗಳಿಗೆ ಕರಡು, ಎನ್.ಎಂ.ಆರ್ ಮತ್ತು ಖರೀದಿ ಬಗ್ಗೆ ವೋಚರ್‌ನ್ನು ನೀಡಿದ್ದರು. ಆ ಪ್ರಕಾರ ತಾನು ಬಿಲ್ಲು ಮಾಡಿಕೊಟ್ಟಿದ್ದು, ಸದರಿ ಬಿಲ್ಲುಗಳನ್ನು ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಿಗೆ ಸಲ್ಲಿಸಿರುತ್ತೇನೆ ಅಂತಾ ನುಡಿದಿರುತ್ತಾರೆ. ಈ ಬಗ್ಗೆ ಅವರು ಯಾವುದೇ ದಾಖಲಾತಿಗಳನ್ನು

ಹಾಜರುಪಡಿಸಿರುವುದಿಲ್ಲ. ಮುಂದುವರೆದು ಕಾಮಗಾರಿ ಬಿಲ್ಲುಗಳನ್ನು ಎಂ.ಐ.ಎಸ್ ನಲ್ಲಿ ಸಾವಿತ್ರಮ್ಮ ಇವರು ದಾಖಲಿಸಿ ನಂತರ ಕಾರ್ಯದರ್ಶಿ ವಿಜಯಣ್ಣ (ಆ.ಸ.ನೌ–4) ಇವರು ಪಾವತಿಸಿರುತ್ತಾರೆ ಅಂತಾ ನುಡಿದಿರುತ್ತಾರೆ. ಈ ಬಗ್ಗೆಯೂ ಸಹ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

22.ಆ.ಸ.ನೌ–4 ಇವರು ಡಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿದ್ದು, ಇವರು ಕೊಡಿಗೇಹಳ್ಳಿ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಯಾಗಿ 2009–11ನೇ ಸಾಲಿನವರೆಗೆ ಕರ್ತವ್ಯ ನಿರ್ವಹಿಸಿದ್ದು, ಕೊಡಿಗೇಹಳ್ಳಿ ಸರ್ಕಾರಿ ಪ್ರೌಢಶಾಲೆ ಆವರಣ ಹಾಗೂ ದೇವಾಲಯದ ಎದುರು ಗಿಡ ನೆಡುವ ಕಾಮಗಾರಿಯ ಬಗ್ಗೆ ಪುಟ ನಂ.1 ರಿಂದ 30 ಉಳ್ಳ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಡಿ.13 ಎಂದು ಗುರುತಿಸಲಾಗಿದೆ. ನಿ.ಡಿ.13 ರಲ್ಲಿ ಕಾಮಗಾರಿ ಪ್ರಾರಂಭ ಪತ್ರವನ್ನು ಹಾಜರುಪಡಿಸಿದ್ದು, ಇದರಲ್ಲಿ ಈ ಕಾಮಗಾರಿಗೆ ಒಟ್ಟು ಅಂದಾಜು ಮೊತ್ತ ರೂ.77,000/– ಮಂಜೂರಾಗಿದ್ದು, ಅದರಲ್ಲಿ ಅಕುಷಲ ಕಾರ್ಮಿಕರ ಮೊಬಲಗು ರೂ.50,892/–, ಸಾಮಗ್ರಿಗಳ ಬಾಬ್ತು ರೂ.26,108/– ಮಂಜೂರಾಗಿದ್ದು ಇರುತ್ತದೆ ಅಂತಾ ನಮೂದು ಇರುತ್ತದೆ. ಇದನ್ನು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯಿತಿ, ತುರುವೇಕೆರೆ ಇವರು ಸಹಿ ಮಾಡಿದ್ದು, ಅದರಲ್ಲಿ ಮಂಜೂರಾದ ದಿನಾಂಕ ನಮೂದು ಇರುವುದಿಲ್ಲ. ಕಾಮಗಾರಿಗಳ ಕಾರ್ಯಾದೇಶ ಪತ್ರ ದಿನಾಂಕ: 03/01/2011ರದು ಹಾಜರುಪಡಿಸಿರುತ್ತಾರೆ. ಈ ಕಾಮಗಾರಿಗೆ ಸಂಬಂಧಿಸಿದಂತೆ ಅಳತೆ ಪುಸ್ತಕವನ್ನು ಹಾಜರುಪಡಿಸಿದ್ದು, ಅದರಲ್ಲಿ 300 ಸಸಿಗಳನ್ನು ನೆಡುವುದರ ಬಗ್ಗೆ ಇದ್ದು, ತಗ್ಗು ತೋಡುವುದು, ಗಿಡಗಳನ್ನು ನೆಡೆಸಿದ ನಂತರ ತಗ್ಗು ಮುಚ್ಚುವುದು, ನೀರು ಹಾಕುವುದು, ರಸಗೊಬ್ಬರ ಹಾಕುವುದು ಮತ್ತು ಇತರೇ ಖರ್ಚಿಗಾಗಿ ಒಟ್ಟು ರೂ.36,700/– ಗಳನ್ನು ಖರ್ಚು ಮಾಡಲಾಗಿದೆ ಅಂತಾ ನಮೂದು ಇರುತ್ತದೆ. ಇವುಗಳಿಗೆ ಆ.ಸ.ನೌ–1, 4 ಹಾಗೂ ವಲಯ ಅರಣ್ಯಾಧಿಕಾರಿಗಳು ಸಹಿ ಮಾಡಿರುತ್ತಾರೆ. ಅಳತೆ ಪುಸ್ತಕದಲ್ಲಿ ಡೇಟ್ ಆಫ್ ರೆಕಾರ್ಡಿಂಗ್ ನಮೂದು ಇರುವುದಿಲ್ಲ. ಸಾಮಗ್ರಿ ಖರೀದಿಗಾಗಿ ರೂ.9,564/– ಗಳನ್ನು ಖರ್ಚು ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಕಾರ್ಯದರ್ಶಿ, ಗ್ರಾಮ ಪಂಚಾಯಿತಿ ಖಾತೆಗೆ

ರೂ.36,700/- ಜಮಾ ಮಾಡಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುತ್ತಾರೆ. ಅದರಂತೆ ಮಸ್ಟರ್ ರೋಲ್‌ನ್ನು ಹಾಜರುಪಡಿಸಿದ್ದು, ಅದರಲ್ಲಿ ಈ ಕಾಮಗಾರಿಗೆ 05/01/2011 ರಿಂದ 11/01/2011 ರವರೆಗೆ ಕೂಲಿ ಕಾರ್ಮಿಕರಿಗೆ ಖರ್ಚಾದ ಹಣ ರೂ.21,000/- ಹಾಗೂ ದಿನಾಂಕ: 24/01/2011 ರಿಂದ 30/01/2011 ರವರೆಗೆ ನಡೆಸಿದ ಕಾಮಗಾರಿಗೆ ರೂ.15,000/- ಖರ್ಚಾಗಿರುತ್ತದೆ ಅಂತಾ ನಮೂದು ಇರುತ್ತದೆ. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಎದುರುದಾರರು ರೂ.46,240/- ಖರ್ಚಾಗಿರುತ್ತದೆ ಅಂತಾ ಹೇಳಿರುತ್ತಾರೆ. ಈ ಹಣಕ್ಕೆ ಆ.ಸ.ನೌ ರವರು ಜವಾಬ್ದಾರರಾಗಿರುತ್ತಾರೆ ಅಂತಾ ಹೊಣೆಯನ್ನು ಹೊರಿಸಿರುತ್ತಾರೆ. ಪಿ.ಡಬ್ಲ್ಯೂ.2 ಇವರು ತಮ್ಮ ಪಾಟಿಸವಾಲಿನಲ್ಲಿ ಇಷ್ಟು ಮೊತ್ತ ಅವ್ಯವಹಾರ ಆಗಿರುತ್ತದೆ ಅಂತಾ ಯಾವ ಆಧಾರದ ಮೇಲೆ ಹೇಳಿರುತ್ತೀರಿ ಎಂದು ಮಾಡಿದ ಸಲಹೆಗೆ ಸಾಕ್ಷಿಯು ಕಾರ್ಯನಿರ್ವಾಹಕ ಅಧಿಕಾರಿಗಳು ಸಲ್ಲಿಸಿದ ಕಾಮಗಾರಿಯ ಪಟ್ಟಿಯಲ್ಲಿ ಅದಕ್ಕೆ ಖರ್ಚು ಮಾಡಿದ ವೆಚ್ಚವನ್ನು ತಿಳಿಸಿದ್ದು, ಈ ಆಧಾರದ ಮೇಲೆ ಇಷ್ಟು ಮೊತ್ತದ ಹಣ ಅವ್ಯವಹಾರ ಆಗಿರುತ್ತದೆ ಅಂತಾ ಹೇಳಿರುತ್ತೇನೆ ಅಂತಾ ನುಡಿದಿರುತ್ತಾರೆ. ಈ ಬಗ್ಗೆ ನಿ.ಪಿ.21ನ್ನು ದಾಖಲಿಸಿದ್ದು, ಅದು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಇವರು ಕೊಟ್ಟಿದ್ದು, ಕಾರ್ಯನಿರ್ವಾಹಕ ಅಧಿಕಾರಿಗಳು ಕೊಟ್ಟಿರುವುದಿಲ್ಲ. ಅದರಲ್ಲಿ ಖರ್ಚಾದ ಮೊತ್ತ ರೂ.46,263/- ಅಂತಾ ನಮೂದು ಇರುತ್ತದೆ. ಆದರೆ ಉಳಿದ ಹಣ ಏನಾಗಿರುತ್ತದೆ ಎನ್ನುವ ಬಗ್ಗೆ ತನಿಖಾಧಿಕಾರಿಗಳು ಅಥವಾ ಆ.ಸ.ನೌ ರವರು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಅಂಶ-1 ರಲ್ಲಿ ಹೇಳಿದ ಹಾಗೆ ಈ ಖರ್ಚಾದ ಹಣಕ್ಕೆ ಆ.ಸ.ನೌ ರವರು ಜವಾಬ್ದಾರರಾಗಿರುತ್ತಾರೆ ಎನ್ನುವ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಆದರೆ ಆ.ಸ.ನೌ-1 ಇವರು ಸದರಿ ಗಿಡಗಳನ್ನು ನಿರ್ವಹಣೆ ಬಗ್ಗೆ ತಮ್ಮ ಜವಾಬ್ದಾರಿ ಇರುವುದಿಲ್ಲ ಎನ್ನುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದರೆ ಈ ಕಾಮಗಾರಿಯು ಸರಿಯಾಗಿ ನಿರ್ವಹಣೆ ಮಾಡದೇ ಇದಿದ್ದು ಮೇಲ್ನೋಟಕ್ಕೆ ಕಂಡುಬಂದಿದ್ದು, ನನ್ನ ಅಭಿಪ್ರಾಯದಲ್ಲಿ ಆ.ಸ.ನೌ-1 ರಿಂದ 4 ರವರು ಜವಾಬ್ದಾರಿ ಆಗಿರುತ್ತಾರೆ. ಆದ್ದರಿಂದ, ಅಂಶ-1ನ್ನು ಭಾಗಶಃ ಸಕಾರಾತ್ಮಕವಾಗಿ ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಸಾಬೀತುಪಡಿಸಿರುತ್ತಾರೆ ಅಂತಾ ನಿರ್ಣಯಕ್ಕೆ ಬಂದಿರುತ್ತೇನೆ.

23. **ಅಂಶ–2:** ಮರಸರಕೊಟ್ಟಿಗೆಯಿಂದ ಎಸ್.ಸಿ ಕಾಲೋನಿವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯ ಬಗ್ಗೆ ತನಿಖಾಧಿಕಾರಿಗಳು ತಮ್ಮ ವರದಿಯ ಜೊತೆಗೆ ಅನುಬಂಧ–1 ಮತ್ತು 2ನ್ನು ಸಲ್ಲಿಸಿದ್ದು, ಅದರಲ್ಲಿ ಈ ಕಾಮಗಾರಿಯ ಅಂದಾಜು ಮೊತ್ತ ರೂ.25,000/–; ಕಾಮಗಾರಿಗೆ ಖರ್ಚಾದ ಮೊತ್ತ ಕೂಲಿಗಾಗಿ ರೂ.23,600/– ಅಂತಾ ಹೇಳಿರುತ್ತಾರೆ. ಈ ಬಗ್ಗೆ ಅಳತೆ ಪುಸ್ತಕ ನಂ.20343 ಪುಟ ನಂ.10 ರಿಂದ 11 ರಲ್ಲಿ ನಮೂದು ಇರುತ್ತದೆ ಅಂತಾ ಹೇಳಿರುತ್ತಾರೆ. ಇವರ ಅಭಿಪ್ರಾಯದಲ್ಲಿ ಸದರಿ ಕಾಮಗಾರಿಯನ್ನು ಪರಿವೀಕ್ಷಿಸಿದಾಗ ಹಲವು ಭಾಗಗಳಲ್ಲಿ ರಸ್ತೆಯ ಮೇಲ್ಮೈಯಲ್ಲಿ ಮಳೆಯ ನೀರು ನಿಂತು ಕೊಚ್ಚೆಯಾಗಿರುವುದು ಕಂಡುಬಂದಿದ್ದು, ಕೈಗೊಳ್ಳಲಾಗಿದೆ ಎಂದು ಹೇಳಲಾದ ಜಂಗಲ್ ತೆಗೆಯುವುದು ಹಾಗೂ ಗ್ರಾವೇಲ್ ಹಾಕಿರುವು ಅಂಶ ಪ್ರಸ್ತುತ ಕಂಡುಬಾರದೇ ಇರುತ್ತದೆ. ಆದರೆ ಈ ರಸ್ತೆಗಳಲ್ಲಿ ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾಗಿ ಈ ಗ್ರಾವೇಲ್ ಒದಗಿಸಿರುವ ಅಂಶದ ಅವಶ್ಯಕತೆ ಕಂಡುಬಾರದೇ ಇದ್ದ ಅಂಶಗಳನ್ನು ಗಮನಿಸಲಾಗಿದೆ ಅಂತಾ ಹೇಳಿರುತ್ತಾರೆ. ಪಿ.ಡಬ್ಲ್ಯೂ.1 ಇವರು ಈ ಕಾಮಗಾರಿಯ ಬಗ್ಗೆ 4 ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಪಿ.5 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿ ಅನುಕ್ರಮ ನಂ.170 ರಿಂದ 173 ರವರೆಗೆ ಇರುತ್ತದೆ. ತನಿಖಾಧಿಕಾರಿಗಳು ತಾವು ವೀಕ್ಷಿಸಿದ ಬಗ್ಗೆ ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಪಿ.31 ಎಂದು ಗುರುತಿಸಲಾಗಿದ್ದು, ಅವುಗಳಲ್ಲಿ ಈ ಕಾಮಗಾರಿಯ ಛಾಯಾಚಿತ್ರ ಅನುಕ್ರಮ ನಂ.172 ಎಂದು ಗುರುತಿಸಲಾಗಿದೆ. ತನಿಖಾಧಿಕಾರಿಗಳ ವರದಿಯ ಪ್ರಕಾರ ಈ ಕಾಮಗಾರಿಯ ಬಗ್ಗೆ ಆ.ಸ.ನೌ–2, 3, 4 ಹಾಗೂ ಶ್ರೀ. ಡಿ ಮಹೇಂದ್ರ ಇವರು ಜವಾಬ್ದಾರರಾಗಿರುತ್ತಾರೆ ಅಂತಾ ಹೇಳಿರುತ್ತಾರೆ. ಆ.ಸ.ನೌ–3 ಇವರು ಈ ಕಾಮಗಾರಿಗಳ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಇವರು ತಮ್ಮ ಪಾಟಿಸವಾಲಿನಲ್ಲಿ ಈ ಕಾಮಗಾರಿಯು ಇವರ ಅವಧಿಯಲ್ಲಿ ಆಗಿದ್ದು ಅಲ್ಲದೇ ರಸ್ತೆ ಕಾಮಗಾರಿ ಮಾಡಿದ್ದೇ ಆದರೆ ಅದು 3 ವರ್ಷ ಬಾಳಿಕೆ ಬರಬೇಕು ಎಂದು ಒಪ್ಪಿಕೊಂಡಿರುತ್ತಾರೆ. ಅಲ್ಲದೇ ರಸ್ತೆ ಕಾಮಗಾರಿಯನ್ನು ಪ್ರಾರಂಭಿಸುವುದಕ್ಕಿಂತ ಮೊದಲು, ಕಾಮಗಾರಿ ನಡೆಯುತ್ತಿದ್ದಾಗ ಮತ್ತು ಕಾಮಗಾರಿ ಪೂರ್ಣಗೊಂಡ ನಂತರ ಛಾಯಾಚಿತ್ರಗಳನ್ನು ತೆಗೆಯಬೇಕಾಗುತ್ತದೆ ಅಂತಾ ಒಪ್ಪಿಕೊಂಡಿರುತ್ತಾರೆ. ಛಾಯಾಚಿತ್ರಗಳನ್ನು ಹಾಜರುಪಡಿಸಿರುತ್ತೀರಾ ಎಂದು ಕೇಳಿದಾಗ ಅದು ಆ.ಸ.ನೌ–4 ರವರ

ಕೆಲಸವಾಗಿತ್ತು ಅಂತಾ ಹೇಳಿರುತ್ತಾರೆ. ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಭೌತಿಕವಾಗಿ ಕಾಮಗಾರಿಗಳನ್ನು ಪರಿಶೀಲಿಸಿ ಗ್ರಾಮ ಪಂಚಾಯಿತಿಯವರು ಸಲ್ಲಿಸಿರುವ ಎನ್.ಎಂ.ಆರ್ ದಾಖಲೆಗಳಂತೆ ಬಿಲ್ಲುಗಳನ್ನು ತಯಾರಿಸಿ ಸಲ್ಲಿಸಿರುತ್ತೇನೆ ಅಂತಾ ಹೇಳಿರುತ್ತಾರೆ. ಆ.ಸ.ನೌ–4 ಇವರು ಡಿ.ಡಬ್ಲ್ಯೂ.3 ಎಂದು ಸಾಕ್ಷಿ ನುಡಿದಿದ್ದು, ಈ ಕಾಮಗಾರಿಗೆ ಸಂಬಂಧಪಟ್ಟಂತೆ ನಿ.ಡಿ.6 ರಿಂದ 10 ರವರೆಗಿನ ದಾಖಲಾತಿಗಳನ್ನು ಹಾಜರುಪಡಿಸಿರುತ್ತಾರೆ. ನಿ.ಡಿ.6 ಕಾಮಗಾರಿ ಪ್ರಾರಂಭ ಪತ್ರ ಇದ್ದು, ಇದನ್ನು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ತುರುವೇಕೆರೆ ಇವರು ನೀಡಿದ್ದು ಅದರಲ್ಲಿ ಈ ಕಾಮಗಾರಿಯ ಅಂದಾಜು ಮೊತ್ತ ರೂ.25,000/– ಅಂತಾ ಇರುತ್ತದೆ. ನಿ.ಡಿ.7ನ್ನು ಪರಿಶೀಲಿಸಿದಾಗ ಅದರಲ್ಲಿ ಅಂದಾಜು ಮೊತ್ತು ರೂ.40,000/– ಅಂತಾ ನಮೂದು ಇರುತ್ತದೆ. ನಿ.ಡಿ.8 ಮಸ್ಟರ್ ರೋಲ್ ಇದ್ದು, ಈ ಕಾಮಗಾರಿಯನ್ನು ದಿನಾಂಕ: 12/02/2011 ರಿಂದ 18/02/2011 ರವರೆಗೆ ಕೈಗೊಂಡ ಬಗ್ಗೆ ಹಾಜರುಪಡಿಸಿದ್ದು, ಕೂಲಿ ಕಾರ್ಮಿಕರಿಗೆ ರೂ.17,500/– ಹಣ ಖರ್ಚಾಗಿರುತ್ತದೆ ಅಂತಾ ನಮೂದು ಇರುತ್ತದೆ. ನಿ.ಡಿ.9 ಈ ಕಾಮಗಾರಿಗೆ ಸಂಬಂಧಪಟ್ಟಂತೆ 3 ಛಾಯಾಚಿತ್ರಗಳು ಇರುತ್ತದೆ. ನಿ.ಡಿ.10 ಖಾತೆದಾರರಿಗೆ ಹಣ ಬಿಡುಗಡೆ ಮಾಡುವುದಕ್ಕೆ ಅಂಚೆ ಕಚೇರಿ ತಿಪಟೂರು ಇವರಿಗೆ ಬರೆದ ಪತ್ರ ಇದ್ದು, ಇದರಲ್ಲಿ ಮೊತ್ತ ರೂ.23,600/– ಅಂತಾ ನಮೂದು ಇರುತ್ತದೆ. ಅದರ ಜೊತೆಗೆ ಡಿ.ಡಿ ಯನ್ನು ಸಹ ಹಾಗೂ ಅಳತೆ ಪುಸ್ತಕವನ್ನು ಹಾಜರುಪಡಿಸಿರುತ್ತಾರೆ. ಈ ಕಾಮಗಾರಿ 2009–10ರಲ್ಲಿ ಕೈಗೊಂಡಿದ್ದು, ದೂರುದಾರರು ದೂರನ್ನು ದಿನಾಂಕ: 17/07/2012 ರಲ್ಲಿ ಸಲ್ಲಿಸಿದ್ದು, ತನಿಖಾಧಿಕಾರಿಗಳು ದಿನಾಂಕ: 30/08/2013 ರಂದು ಭೇಟಿ ನೀಡಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ಪಾಟಿಸವಾಲಿನಲ್ಲಿ ತಾನು ಸ್ಥಳಕ್ಕೆ ಭೇಟಿ ನೀಡಿದಾಗ ಆಗಲೇ 2 ವರ್ಷಗಳಾಗಿದ್ದವು ಅಂತಾ ನುಡಿದಿರುತ್ತಾರೆ. ಅಲ್ಲದೇ ಇವರು ಸ್ಥಳಕ್ಕೆ ಭೇಟಿ ನೀಡಿದಾಗ ಛಾಯಾಚಿತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ.31 ಎಂದು ಗುರುತಿಸಲಾಗಿದ್ದು, ಈ ಕಾಮಗಾರಿಗೆ ಸಂಬಂಧಪಟ್ಟಂತೆ ಛಾಯಾಚಿತ್ರ ಅನುಕ್ರಮ ನಂ.271 ರಿಂದ 274 ರವರೆಗೆ ಇರುತ್ತದೆ. ಅವುಗಳನ್ನು ಪರಿಶೀಲಿಸಿದಾಗ ರಸ್ತೆಯ ಎರಡೂ ಬದಿಗೆ ತಗ್ಗುಗಳು ಬಿದಿದ್ದು ಕಂಡುಬಂದಿರುತ್ತದೆ. ರಸ್ತೆಯ ಈ ರೀತಿಯ ಸ್ಥಿತಿಗತಿಯ ಬಗ್ಗೆ ಆ.ಸ.ನೌ–2 ರಿಂದ 4 ಇವರು ವಿವರಣೆ ನೀಡಿರುವುದಿಲ್ಲ. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಈ ಕಾಮಗಾರಿಗೆ

ಸಂಬಂಧಿಸಿದಂತೆ ಅವ್ಯವಹಾರ ಆಗಿರುತ್ತದೆ ಅಂತಾ ಹೇಳಿರುತ್ತಾರೆ. ಈಗಾಗಲೇ ಹೇಳಿದ ಹಾಗೆ ಇಷ್ಟು ಮೊತ್ತಕ್ಕೆ ಆ.ಸ.ನೌ ರವರು ಜವಾಬ್ದಾರರಾಗಿರುತ್ತಾರೆ ಎನ್ನುವ ಬಗ್ಗೆ ಸ್ಪಷ್ಟವಾದ ವಿವರಣೆಯನ್ನು ನೀಡಿರುವುದಿಲ್ಲ. ಆ.ಸ.ನೌ–2 ರಿಂದ 4 ಇವರು ಕಾಮಗಾರಿ ಪ್ರಾರಂಭದ, ಕಾಮಗಾರಿ ಪ್ರಗತಿಯಲ್ಲಿದ್ದಾಗ ಹಾಗೂ ಕಾಮಗಾರಿ ಮುಗಿದ ನಂತರ ತೆಗೆದ ಛಾಯಾಚಿತ್ರಗಳನ್ನು ಹಾಜರುಪಡಿಸಿರುವುದಿಲ್ಲ. ಈ ಕಾಮಗಾರಿಯು ನಿರ್ಮಾಣವಾಗಿದ್ದರೂ ಅಂದಾಜು ಪತ್ರಿಕೆಯಂತೆ ಮಾಡಿದ್ದು ಇರುವುದಿಲ್ಲ. ನಿ.ಪಿ.31 ನ್ನು ಪರಿಶೀಲಿಸಿದಾಗ ರಸ್ತೆ ಕಾಮಗಾರಿಯು ಕಳಪೆ ಕಾಮಗಾರಿಯಾಗಿರುತ್ತದೆ ಅಂತಾ ಮೇಲ್ನೋಟಕ್ಕೆ ಕಂಡಬರುತ್ತದೆ. ಆದ್ದರಿಂದ, ಅಂಶವನ್ನು ಭಾಗಶಃ ಸಕಾರಾತ್ಮಕವಾಗಿ ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಸಾಬೀತುಪಡಿಸಿರುತ್ತಾರೆ ಅಂತಾ ನಿರ್ಣಯಕ್ಕೆ ಬಂದಿರುತ್ತೇನೆ.

24.**ಅಂಶ–3:** ಕಲ್ಕೇರಿ ಗ್ರಾಮದಿಂದ ಚಿನ್ನಾರಿ ಕಟ್ಟೆಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿಯು ಕಳಪೆ ಕಾಮಗಾರಿಯಾಗಿದ್ದು, ಅದಕ್ಕೆ ಆ.ಸ.ನೌ–2 ರಿಂದ 4 ಇವರು ರೂ.31,750/– ಗಳಿಗೆ ಜವಾಬ್ದಾರರಾಗಿರುತ್ತಾರೆ ಅಂತ ದೋಷಾರೋಪಣೆ ಇರುತ್ತದೆ. ತನಿಖಾಧಿಕಾರಿಗಳ ವರದಿಯ ಪ್ರಕಾರ ಈ ಕಾಮಗಾರಿಗೆ ಅಂದಾಜು ಮೊತ್ತ ರೂ.34,000/–ಗಳಿದ್ದು, ಕೂಲಿಗಾಗಿ ಖರ್ಚಾದ ಮೊತ್ತ ರೂ.31,750/– ಇದ್ದು, ಸ್ಥಳ ಪರಿಶೀಲನೆ ಮಾಡಿದಾಗ ರಸ್ತೆಯ ಮೇಲ್ಮೈ ಅಕ್ಕಪಕ್ಕದಲ್ಲಿರುವ ಜಮೀನುಗಳಿಗಿಂತ ತೀರಾ ತಗ್ಗಿನಲ್ಲಿದ್ದು, ಕೈಗೊಳ್ಳಲಾಗಿದೆ ಎಂದು ಹೇಳಲಾದ ಜಂಗಲ್ ತೆಗೆಯುವುದು ಹಾಗೂ ಗ್ರಾವೇಲ್ ಹಾಕಿರುವ ಅಂಶ ಪ್ರಸ್ತುತ ಕಂಡುಬಾರದೇ ಇದ್ದು, ಈ ಗ್ರಾವೇಲ್ ಒದಗಿಸಿರುವ ಅಂಶದ ಅವಶ್ಯಕತೆ ಕಂಡುಬಾರದೇ ಇದದ್ದನ್ನು ಗಮನಿಸಲಾಗಿದೆ ಎಂದು ಹೇಳಿರುತ್ತಾರೆ. ಈ ಬಗ್ಗೆ ಛಾಯಾಚಿತ್ರಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿ.ಪಿ.31 ರಲ್ಲಿ ಅನುಕ್ರಮ ನಂ.268 ರಿಂದ 270 ರವರೆಗೆ ಇರುತ್ತದೆ. ಆ.ಸ.ನೌ–4 ಇವರು ಈ ಕಾಮಗಾರಿಯ ಬಗ್ಗೆ ನಿ.ಡಿ.12ನ್ನು ಹಾಜರುಪಡಿಸಿರುತ್ತಾರೆ. ಅದು ಕಾಮಗಾರಿಯ ಪ್ರಾರಂಭ ಪತ್ರವಿದ್ದು, ಅದರಲ್ಲಿ ಅಂದಾಜು ಮೊತ್ತು ರೂ.1 ಲಕ್ಷ ಇರುತ್ತದೆ ಅಂತಾ ನಮೂದು ಇರುತ್ತದೆ. ಅದರಲ್ಲಿ ಅಕುಶಲ ಕಾರ್ಮಿಕರಿಗೆ ಎಷ್ಟು ಹಣ ಮೀಸಲಾಗಿರುತ್ತದೆ ಹಾಗೂ ಸಾಮಗ್ರಿಗಳಿಗೆ ಎಷ್ಟು ಹಣ ಮೀಸಲಾಗಿರುತ್ತದೆ ಅಂತಾ ನಮೂದು ಇರುವುದಿಲ್ಲ. ಈ ಕಾಮಗಾರಿಗೆ ಸಂಬಂಧಪಟ್ಟಂತೆ

ಮಸ್ಟರ್ ರೋಲ್‌ನ್ನು ಹಾಜರುಪಡಿಸಿದ್ದು, ಅದರಲ್ಲಿ ಈ ಕಾಮಗಾರಿಯನ್ನು ದಿನಾಂಕ: 10/03/2011 ರಿಂದ 16/03/2011 ರವರೆಗೆ ಕೈಗೊಳ್ಳಲಾಗಿದ್ದು, ಅದಕ್ಕೆ ಒಟ್ಟು ರೂ.31,750/– ಖರ್ಚು ಮಾಡಲಾಗಿದೆ ಅಂತಾ ನಮೂದು ಇರುತ್ತದೆ. ಈ ಕಾಮಗಾರಿಗಳಿಗೆ ಎಷ್ಟು ಹಣ ಬಿಡುಗಡೆಯಾಗಿರುತ್ತದೆ ಎನ್ನುವುದಕ್ಕೆ ತನಿಖಾಧಿಕಾರಿಗಳು ಸಹ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ತಮ್ಮ ವರದಿಯಲ್ಲಿ ಅಂದಾಜು ಮೊತ್ತು ರೂ.34,000/– ಅಂತಾ ತೋರಿಸಿರುತ್ತಾರೆ. ಆದರೆ ನಿ.ಡಿ.12ನ್ನು ಪರಿಶೀಲಿಸಿದಾಗ ಅದರಲ್ಲಿ ರೂ.1 ಲಕ್ಷ ಅಂತಾ ನಮೂದು ಇರುತ್ತದೆ. ತನಿಖಾಧಿಕಾರಿಗಳು ತಮ್ಮ ಪಾಟಿಸವಾಲಿನಲ್ಲಿ ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಪರಿಶೀಲನೆ ಮಾಡಿರುತ್ತೀರಾ ಅಂತಾ ಕೇಳಿದಾಗ ಸದರಿ ದಾಖಲಾತಿಗಳು ಕಡತದಲ್ಲಿ ಇದ್ದವು ಅಂತಾ ಹೇಳುತ್ತಾರೆ ಆದರೆ ಸದರಿ ದಾಖಲಾತಿಗಳನ್ನು ವಿಚಾರಣೆಯಲ್ಲಿ ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಖರ್ಚು ಮಾಡಿದ ಹಣಕ್ಕೆ ಅಂದರೆ ರೂ.34,000/– ಗಳಿಗೆ ಆ.ಸ.ನೌ ರವರು ಜವಾಬ್ದಾರಿ ಮಾಡಿರುತ್ತಾರೆ ಎನ್ನುವುದು ಸರಿ ಇರುವುದಿಲ್ಲ. ಆ.ಸ.ನೌ ರವರು ಸಹ ಸಂಪೂರ್ಣವಾಗಿ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಈ ಅಂಶವನ್ನು ಭಾಗಶಃ ಸಕಾರಾತ್ಮಕವಾಗಿ ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಸಾಬೀತುಪಡಿಸಿರುತ್ತಾರೆ ಅಂತಾ ನಿರ್ಣಯಕ್ಕೆ ಬಂದಿರುತ್ತೇನೆ.

25. **ಅಂಶ–4:** ಕಲ್ಕರ ಗೇಟ್‌ನಿಂದ ಜೋಗಿಪಾಳ್ಯ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು ಆ.ಸ.ನೌ–2 ರಿಂದ 4 ಇವರು ರೂ.25,000/–ಗಳ ಮೊತ್ತಕ್ಕೆ ಜವಾಬ್ದಾರರಾಗಿರುತ್ತಾರೆ ಅಂತಾ ದೋಷಾರೋಪಣೆಯಲ್ಲಿ ಇರುತ್ತದೆ. ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಈ ಕಾಮಗಾರಿಯ ಅಂದಾಜು ಮೊತ್ತ ರೂ.28,000/– ಗಳಾಗಿದ್ದು, ಕೂಲಿಗಾಗಿ ರೂ.25,000/– ಖರ್ಚಾದ ಮೊತ್ತ ರೂ.25,000/– ಅಂತಾ ನಮೂದಿಸಿರುತ್ತಾರೆ. ಈ ಕಾಮಗಾರಿಯನ್ನು ಪರಿವೀಕ್ಷಿಸಿದ್ದು, ರಸ್ತೆಯು ಸುಮಾರು 150 ಮೀಟರ್ ಉದ್ದಕ್ಕೆ ಮಣ್ಣಿನ ಮೇಲ್ಮೈ ಇದ್ದು, ಉಳಿದಂತೆ ಜೆಲ್ಲಿ ಮೇಲ್ಮೈ ರಸ್ತೆಯಾಗಿರುತ್ತದೆ. ಕೈಗೊಳ್ಳಲಾಗಿದೆ ಎಂದು ಹೇಳಲಾದ ಜಂಗಲ್ ತೆಗೆಯುವುದು ಹಾಗೂ ಗ್ರಾವೇಲ್ ಹಾಕಿರುವ ಅಂಶ ಪ್ರಸ್ತತ ಕಂಡುಬಾರದೇ ಇದ್ದು, ಆದರೆ ಈ ರಸ್ತೆಗಳಲ್ಲಿ ಸ್ಥಳೀಯ

ಅವಶ್ಯಕತೆಗಳಿಗೆ ಅನುಗುಣವಾಗಿ ಈ ಗ್ರಾವೇಲ್ ಒದಗಿಸಿರುವ ಅಂಶದ ಅವಶ್ಯಕತೆ ಪರಿಮಾಣ ಸ್ವಲ್ಪವಿರುತ್ತದೆ. ಆದರೆ ಅವರ ಅಳತೆ ಪುಸ್ತಕದಲ್ಲಿ ಸುಮಾರು 525 ಮೀಟರ್ ಉದ್ದಕ್ಕೆ 75 ಮಿ.ಮಿ ಹಾಗೂ 100 ಮೀಟರ್ ಉದಕ್ಕೆ 150 ಮಿ.ಮಿ ದಪ್ಪಕ್ಕೆ ಗ್ರಾವೇಲ್ ಅಂಶದ ಹೊದಿಕೆ ಒದಗಿಸಿರುವ ಅಂಶವನ್ನು ಗಮನಿಸಲಾಗಿದ್ದು, ಆದರೆ ಇಷ್ಟು ಪರಿಮಾಣದ ಗ್ರಾವೇಲ್ ಹೊದಿಕೆ ಅಂಶದ ಅವಶ್ಯಕತೆ ಇಲ್ಲದೇ ಇರುವುದು ಸ್ಥಳದಲ್ಲಿ ಕಂಡುಬಂದಿರುತ್ತದೆ ಅಂತಾ ಹೇಳಿರುತ್ತಾರೆ. ಆ.ಸ.ನೌ–4 ಇವರು ಈ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ನಿ.ಡಿ.11ನ್ನು ಗುರುತಿಸಿಕೊಂಡಿರುತ್ತಾರೆ. ನಿ.ಡಿ.11 ಕಾಮಗಾರಿ ಪೂರ್ಣಗೊಂಡ ವರದಿ ಇದ್ದು, ಇದರಲ್ಲಿ ಅಂದಾಜು ಮೊತ್ತ ರೂ.28,200/–, ಕೂಲಿಗಾರರ ವೆಚ್ಚ ರೂ.28,120/– ಅಂತಾ ನಮೂದು ಇರುತ್ತದೆ. ಅಲ್ಲದೇ, ಕಾಮಗಾರಿ ಪ್ರಾರಂಭವಾದ ದಿನಾಂಕ: 28/01/2011 ಹಾಗೂ ಮುಕ್ತಾಯವಾದ ದಿನಾಂಕ: 17/02/2011 ಅಂತಾ ನಮೂದು ಇರುತ್ತದೆ. ಅಳತೆ ಪುಸ್ತಕದ ನಂ.20343 ಪುಟ ನಂ.7 ಅಂತಾ ಇರುತ್ತದೆ. ಕಾಮಗಾರಿಯನ್ನು ನಿರ್ವಹಿಸಿದ ಅಧಿಕಾರಿ ಆ.ಸ.ನೌ–3 ಇವರು ಇರುತ್ತಾರೆ. ಈ ಬಗ್ಗೆ ಮಸ್ಟರ್ ರೋಲ್‌ನ್ನು ಹಾಜರುಪಡಿಸಿದ್ದು, ಅದರಲ್ಲಿ ಕಾಮಗಾರಿ ಪ್ರಾರಂಭವಾದ ದಿನಾಂಕ: 28/01/2011 ರಿಂದ 03/02/2011 ರವರೆಗೆ ಒಟ್ಟು ಕೂಲಿಗಾರರಿಗೆ ಖರ್ಚಾದ ಮೊತ್ತ ರೂ.9,800/– ಗಳಾಗಿರುತ್ತವೆ. ಅದೇ ರೀತಿ ದಿನಾಂಕ: 04/02/2011 ರಿಂದ 10/02/2011 ರವರೆಗಿನ ಮಸ್ಟರ್ ರೋಲ್‌ನ್ನು ಹಾಜರುಪಡಿಸಿದ್ದು, ಅವುಗಳಲ್ಲಿ ಕೂಲಿಗಾರರಿಗೆ ಖರ್ಚಾದ ಮೊತ್ತ ರೂ.9,800/– ಗಳಾಗಿರುತ್ತವೆ ಹಾಗೂ ದಿನಾಂಕ: 11/02/2011 ರಿಂದ 17/02/2011 ರವರೆಗೆ ಮಸ್ಟರ್ ರೋಲ್‌ನ್ನು ಹಾಜರುಪಡಿಸಿದ್ದು, ಅದರಲ್ಲಿ ಕೂಲಿಗಾರರಿಗೆ ಖರ್ಚಾದ ಮೊತ್ತ ರೂ.8,400/– ಗಳಂತ ಇರುತ್ತವೆ. ಈ ಎಲ್ಲಾ ಮೊತ್ತಗಳನ್ನು ಸೇರಿಸಿದಾಗ ರೂ.28,000/– ಗಳ ಮೊತ್ತವಾಗಿರುತ್ತದೆ. ಕೂಲಿಗಾರರಿಗೆ ಹಣ ನೀಡಿದ ಬಗ್ಗೆ ವ್ಯವಸ್ಥಾಪಕರು ವಿಜಯ ಬ್ಯಾಂಕ್; ವ್ಯವಸ್ಥಾಪಕರು, ಎಸ್.ಬಿ.ಎಂ ಹಾಗು ವ್ಯವಸ್ಥಾಪಕರು, ಕರ್ನಾಟಕ ಬ್ಯಾಂಕ್, ತುರುವೇಕೆರೆ ಇವರಿಗೆ ಚೆಕ್ಕುಗಳ ಮೂಲಕ ಸಂಬಂಧಪಟ್ಟ ಖಾತೆ ಇವರಿಗೆ ಜಮಾ ಮಾಡಲು ಕೇಳಿಕೊಂಡಿದ್ದು ಇರುತ್ತದೆ. ತನಿಖಾಧಿಕಾರಿಗಳು ತಮ್ಮ ವರದಿಯ ಜೊತೆಗೆ ಅಳತೆ ಪುಸ್ತಕವನ್ನು ಹಾಜರುಪಡಿಸಿರುವುದಿಲ್ಲ. ಆ.ಸ.ನೌ–2 ರಿಂದ 4 ರವರುಗಳು ಸಹ ಪೂರ್ಣವಾದ ಅಳತೆ ಪುಸ್ತಕವನ್ನು ಹಾಜರುಪಡಿಸಿರುವುದಿಲ್ಲ. ಈಗಾಗಲೇ ಹೇಳಿದ ಹಾಗೆ

ತನಿಖಾಧಿಕಾರಿಗಳು ತಮ್ಮ ಪಾಟಿಸವಾಲಿನಲ್ಲಿ ಸದರಿ ಕಾಮಗಾರಿಗಳಿಗೆ ಸಂಬಂಧಪಟ್ಟಂತೆ ಕೇವಲ ಕಾರ್ಯನಿರ್ವಾಹಕ ಅಧಿಕಾರಿಗಳು ಸಲ್ಲಿಸಿದ ಪಟ್ಟಿಯ ಆಧಾರದ ಮೇಲೆ ಹಣ ಅವ್ಯವಹಾರ ಆಗಿರುತ್ತದೆ ಅಂತಾ ಹೇಳಿರುತ್ತೇನೆ ಅಂತಾ ಒಪ್ಪಿಕೊಂಡಿದ್ದರಿಂದ, ಈ ಕಾಮಗಾರಿಗೆ ಸಂಬಂಧಪಟ್ಟಂತೆ ಖರ್ಚಾದ ಮೊತ್ತದ ಹಣಕ್ಕೆ ಇವರು ಜವಾಬ್ದಾರರಾಗಿರುತ್ತಾರೆ ಅಂತಾ ಹೇಳಿರುವುದು ನನ್ನ ಅಭಿಪ್ರಾಯದಲ್ಲಿ ಸಮಂಜಸ ಇರುವುದಿಲ್ಲ. ಆದರೆ ಈ ಕಾಮಗಾರಿಗೆ ಸಂಬಂಧಪಟ್ಟಂತೆ ಆ.ಸ.ನೌ ರವರು ಸಂಪೂರ್ಣವಾದ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ಈ ಅಂಶವನ್ನು ಭಾಗಶಃ ಸಕಾರಾತ್ಮಕವಾಗಿ ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳು ಸಾಬೀತುಪಡಿಸಿರುತ್ತಾರೆ ಅಂತಾ ನಿರ್ಣಯಕ್ಕೆ ಬಂದಿರುತ್ತೇನೆ.

26. ಈ ಮೇಲ್ಕಂಡ ಕಾರಣಗಳು ಮತ್ತು ಚರ್ಚೆಯಿಂದಾಗಿ, ಆ.ಸ.ನೌ–1, 2, 3 ಮತ್ತು 4 ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ರುಜುವಾತುಪಡಿಸಿರುತ್ತದೆ ಎಂದು ನಿರ್ಣಯಕ್ಕೆ ಬಂದು ಅಂಶ–1 ರಿಂ4 ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

27. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಶಿಸ್ತು ಪ್ರಾಧಿಕಾರದವರು (1) ಶ್ರೀ. ಸಿದ್ದಗಂಗಯ್ಯ, ಅರಣ್ಯ ರಕ್ಷಕ, ಅರಣ್ಯ ಇಲಾಖೆ, ತುರುವೇಕೆರೆ, ತುಮಕೂರು ಜಿಲ್ಲೆ (2) ಶ್ರೀ. **ಹೆಚ್.ಕೆ ಪ್ರಕಾಶ್,** ಹಿಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ (3) ಶ್ರೀ. **ಉಮೇಶ್ ಕೆ.ಪಿ,** ಸಹಾಯಕ ಅಭಿಯಂತರರು, ಜಿಲ್ಲಾ ಪಂಚಾಯತ್ ವಿಭಾಗ, ತುರುವೇಕೆರೆ

ತಾಲ್ಲೂಕು, ತುಮಕೂರು ಜಿಲ್ಲೆ ಮತ್ತು (4) **ಶ್ರೀ. ವಿಜಯಣ್ಣ ಜಿ.ಎಂ,** ಕಾರ್ಯದರ್ಶಿ, ಕೊಡಿಗೇಹಳ್ಳಿ ಗ್ರಾಮ ಪಂಚಾಯತಿ, ತುರುವೇಕೆರೆ ತಾಲ್ಲೂಕು, ತುಮಕೂರು ಜಿಲ್ಲೆ ಇವರುಗಳ ವಿರುದ್ಧ ಆರೋಪಿಸಲಾದ ಆರೋಪಗಳ ಬಗ್ಗೆ ಸರ್ಕಾರಿ ಪ್ರೌಢ ಶಾಲೆ, ಕೊಡಿಗೇಹಳ್ಳಿ ಹಾಗೂ ದೇವಸ್ಥಾನದ ಎದುರುಗಡೆ ಸಸಿಗಳನ್ನು ನೆಡಸಿ ಸರಿಯಾಗಿ ನಿರ್ವಹಣೆ ಮಾಡದೇ ಇರುವುದಕ್ಕೆ ಆ.ಸ.ನೌ–1 ರಿಂದ 4 ಇವರು ಜವಾಬ್ದಾರರಾಗಿರುತ್ತಾರೆ ಅಂತಾ ಸಾಬೀತಾಗಿದ್ದು, ಆದರೆ ಇವರ ಮೇಲೆ ಹೊರಿಸಲಾದ ಆರ್ಥಿಕ ಹಣ ರೂ.46,260/–ಗೆ ಪಾವತಿಗೆ ಹೊಣೆಗಾರರಾಗಿರುತ್ತಾರೆ ಅಂತಾ ಸಾಬೀತುಪಡಿಸಿರುವುದಿಲ್ಲ.

ಮರಸರಕೊಟ್ಟಿಗೆ ಎಸ್.ಸಿ ಕಾಲೋನಿಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ, ಕಲ್ಕೇರಿ ಗ್ರಾಮದಿಂದ ಚಿನ್ನಾರಿ ಕಟ್ಟೆಯವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ ಮತ್ತು ಕಲ್ಕೇರಿ ಗೇಟ್‌ನಿಂದ ಜೋಗಿಪಾಳ್ಯ ರಸ್ತೆ ಅಭಿವೃದ್ಧಿ ಕಾಮಗಾರಿಗಳು ಕಳಪೆ ಮಟ್ಟದ್ದು ಆಗಿರುತ್ತದೆ ಎನ್ನುವುದಕ್ಕೆ ಆ.ಸ.ನೌ–2 ರಿಂದ 4 ಇವರು ಜವಾಬ್ದಾರರಾಗಿದ್ದು, ಆದರೆ ಇವರ ಮೇಲೆ ಹೊರಿಸಲಾದ ಆರ್ಥಿಕ ಹಣ ರೂ.23,600/–, ರೂ.31,750/– ಮತ್ತು ರೂ.25,000/– ಕ್ರಮವಾಗಿ ಪಾವತಿಗೆ ಹೊಣೆಗಾರರಾಗಿರುತ್ತಾರೆ ಅಂತಾ ಸಾಬೀತುಪಡಿಸಿರುವುದಿಲ್ಲ.

ಆದ್ದರಿಂದ, ಅಂಶ–1 ರಿಂದ 4ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿ, ಸದರಿ ಆರೋಪಗಳನ್ನು ರುಜುವಾತುಪಡಿಸಲು ಶಿಸ್ತುಪ್ರಾಧಿಕಾರವು ಭಾಗಶಃ ಸಫಲವಾಗಿರುತ್ತದೆ ಎಂದು ನಿರ್ಣಯಿಸಲಾಗಿದೆ.

ಆ.ಸ.ನೌ–1 ರವರ ನಿವೃತ್ತಿ ದಿನಾಂಕ: 31/03/2017; ಆ.ಸ.ನೌ–2 ರವರ ನಿವೃತ್ತಿ ದಿನಾಂಕ: 31/07/2024; ಆ.ಸ.ನೌ–3 ರವರ ನಿವೃತ್ತಿ ದಿನಾಂಕ: 30/04/2025 ಮತ್ತು ಆ.ಸ.ನೌ–4 ರವರ ನಿವೃತ್ತಿ ದಿನಾಂಕ: 31/08/2024 ಆಗಿರುತ್ತದೆ.

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

(ಸುದೇಶ್ ರಾಜಾರಾಮ್ ಪರದೇಶಿ)
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. Chandrashetty S/o Sannathimmashetty, Kodigehalli, Turuvekere, Tumkur. |
| | **PW-2** | Sri. B Prasannakumar S/o N.R Bandegowda, AEE, Bengaluru. |
| 2 | **Documents marked on behalf of the Disciplinary Authority Ex.P-1 to Ex.P-32** | |
| | **Ex.P.1 & 1(a)** | Complaint given to this institution dtd: 17/07/2012 with Signature. |
| | **Ex.P.2 & 2(a)** | Form No.1 with Signature. |
| | **Ex.P.3 & 3(a)** | Form No.2 with Signature (Affidavit). |
| | **Ex.P.4** | Photographs. |
| | **Ex.P.5** | Photographs. |
| | **Ex.P.6** | Photographs. |
| | **Ex.P.7** | Photographs. |
| | **Ex.P.8** | Photographs. |
| | **Ex.P.9** | Photographs. |
| | **Ex.P. 10** | Photographs. |
| | **Ex.P. 11** | Photographs. |
| | **Ex.P. 12** | Photographs. |
| | **Ex.P. 13** | Photographs. |
| | **Ex.P. 14** | Photographs. |
| | **Ex.P. 15** | Photographs. |
| | **Ex.P. 16** | Photographs. |
| | **Ex.P. 17** | Photographs. |
| | **Ex.P. 18** | Photographs. |
| | **Ex.P. 19** | Photographs. |
| | **Ex.P. 20** | Photographs. |
| | **Ex.P. 21** | Photographs. |
| | **Ex.P. 22** | Photographs. |
| | **Ex.P. 23** | Photographs. |

Sd/-
29/9

| | | |
|---|---|---|
| | **Ex.P. 24** | Letter dtd: 16/08/2013 addressed to Executive Officer, Taluk Panchayath, Turuvekere (Original) |
| | **Ex.P. 25** | Letter dtd: 16/08/2013 addressed to complainant. |
| | **Ex.P. 26** | Mahazar. |
| | **Ex.P. 27** | Mahazar. |
| | **Ex.P. 28** | Letter dtd: 16/03/2013 addressed by Executive Officer, Taluk Panchayath, Turuvekere. |
| | **Ex.P. 29** | Documents enclosed to Ex.P.28. |
| | **Ex.P. 30** | CD |
| | **Ex.P. 31** | Photographs. |
| | **Ex.P. 32 & 32(a)** | Investigation report with signature. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. Siddagangaiah S/o Late Siddalingaiah, Gubbi Taluk, Tumkur District. |
| | **DW-2** | Sri. Umesh K.P S/o Puttanarasaiah, AE, BBMP, Bengaluru. |
| | **DW-3** | Sri. Vijayanna J.M S/o Murudaiah, Secretary, Mathihalli Gram Panchayath, Tumkur. |
| 4 | **Documents marked on behalf of the DGOs through the complainant** | |
| | **Ex.D.1** | M.B Book along with enclosures as Ex.D.1(a). |
| | **Ex.D.2** | Letter dtd: 01/09/2013 addressed to RFO, Turuvekere, Tumkur with enclosures. |
| | **Ex.D.3** | Estimation. |
| | **Ex.D.4** | M.B book along with enclosures. |
| | **Ex.D.5** | Letter dtd: 15/01/2011 addressed to Executive Officer, Taluk Panchayath, Turuvekere. |
| | **Ex.D.6** | Work commencement letter. |
| | **Ex.D.7** | Work commencement letter. |
| | **Ex.D.8** | Muster Roll. |
| | **Ex.D.9** | Xerox copy of photograph. |
| | **Ex.D.10** | Letter dtd: 03/03/2011 addressed to Post Master, Tiptur with enclosures. |
| | **Ex.D.11** | Documents regarding completion of project. |

| | | |
|---|---|---|
| | **Ex.D.12** | Documents regarding commencement of work. |
| | **Ex.D.13** | Documents regarding commencement of work. |
| | **Ex.D.14** | Notification issued by RDPR. |
| | **Ex.D.15** | Circular dtd: 03/05/2012 issued by RDPR. |
| | **Ex.D.16** | Circular dtd: 29/09/2015 issued by Commissioner, o/o Rural Development Commission. |
| | **Ex.D.17** | Letter dtd: 11/04/2014 issued by Commissioner, RDPR, Bengaluru. |

Dated this the 29th September, 2022

Baradeshi 29/9

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.